ಜ್ಯೋತಿಕಾರ್ಯದ ವಾರ್ತಾಪತ್ರ



ಮಹರ್ಷಿ ಅಮರ (1919-1982)

**ಋಷಿಗಳು ಹೇಳಿಕೊಟ್ಟಂತೆ ನಾವು ಧ್ಯಾನವನ್ನು ಕಲಿಸುತ್ತೇವೆ.**

### ಬೆಳಕು

ಈ ಎಲ್ಲ ಸೃಷ್ಟಿಯ ಹಿಂದಿರುವ ಮಹಾನ್ ಶಕ್ತಿ. ಬೆಳಕು ಸಾಕ್ಷಾತ್ ದೇವರು.

### ಜ್ಯೋತಿಕಾರ್ಯ

ಎಲ್ಲ ಜೀವಜಾಲಕ್ಕೆ ತನ್ನ ಅರಿವು ಮತ್ತು ಅನುಭವಗಳ ಮಟ್ಟವನ್ನು ಮೇಲೇರಿಸಿ ಉತ್ತಮವಾಗಿ ಬದುಕಲು ನೆರವಾಗುವುದು.

### ಜ್ಯೋತಿಜೀವಿಗಳು

ಇಲ್ಲಿ ಮತ್ತು ಮೇಲಿನ ಲೋಕಗಳಲ್ಲಿ ಜೀವಿಸುತ್ತ, ಜ್ಞಾನ ಮತ್ತು ಚೈತನ್ಯಗಳ ಬೆಳಕನ್ನು ಸಂಗ್ರಹಿಸಿ ಹರಡುತ್ತಿರುವ ಋಷಿಗಳು.

### ಸಪ್ತಋಷಿಗಳು

ಎಲ್ಲ ಜೀವಜಾಲಕ್ಕೆ ಇಲ್ಲಿ ಶಾಂತಿ ಪರಿಪೂರ್ಣತೆಗಳೊಂದಿಗೆ ಜೀವಿಸುವ ದಾರಿ ತೋರಿಸಿ, ಕೊನೆಗೆ ತಮ್ಮ ಮೂಲವಾದ ಬೆಳಕಿಗೆ ಮಾರ್ಗದರ್ಶಿಸಲು ಆಯ್ಕೆಗೊಂಡಿರುವ ಮಹಾತ್ಮರು.

### ಮಹರ್ಷಿ ಅಮರ

ಸಪ್ತಋಷಿಗಳೊಂದಿಗೆ ನೇರಸಂಪರ್ಕವಿದ್ದ, ಹೊಸ ಯುಗದ ಉನ್ನತಬದುಕಿಗೆ ಅಗತ್ಯವಾದ ಜ್ಞಾನ ಮತ್ತು ಸೂಚನೆಗಳನ್ನು ಕೇಳತಂದ ಒಬ್ಬ ಮಹಾನ್ ಗುರುವಾಗಿದ್ದರು.

### ಗುರೂಜಿ ಕೃಷ್ಣಾನಂದ

ಮಹರ್ಷಿ ಅಮರರ ನೇರ ಶಿಷ್ಯರು. ಅವರು ಋಷಿಗಳ ಮಾರ್ಗವಾದ ಧ್ಯಾನಯೋಗವನ್ನು ಬೆಳೆಸಿ, ತಪೋನಗರದಲ್ಲಿ ಸಪ್ತಋಷಿಗಳ ಆಧ್ಯಾತ್ಮಿಕ ಕೇಂದ್ರವನ್ನು ಸ್ಥಾಪಿಸಿದರು.

### ಸಪ್ತಋಷಿ ಧ್ಯಾನಯೋಗ

ಋಷಿಗಳ ಮಾರ್ಗದರ್ಶನದಲ್ಲಿ ರೂಪುಗೊಂಡಿರುವ, ಧ್ಯಾನ ಮತ್ತು ನಮ್ಮ ಭಾವನೆ–ಆಲೋಚನೆಗಳನ್ನು ಉತ್ತಮಗೊಳಿಸಿಕೊಳ್ಳುವ ಮೂಲಕ ನಮ್ಮ ಲೌಕಿಕ ಮತ್ತು ಆಧ್ಯಾತ್ಮಿಕ ಬದುಕುಗಳನ್ನು ಸಮರ್ಪಕವಾಗಿ ಜೀವಿಸಲು ನೆರವಾಗುವ ಒಂದು ವಿನೂತನ ಆಧ್ಯಾತ್ಮಿಕ ಮಾರ್ಗ.

### ಪ್ರಮಾಣಗಳು

- ★ ನಾವೆಲ್ಲರೂ ಒಂದು ಮಹಾ ಜ್ಯೋತಿಯ (ದೇವರ) ಕಣಗಳು.
- ★ ಪ್ರೀತಿ ನಮ್ಮ ಸ್ವಭಾವ.
- ★ ಮೌನ ನಮ್ಮ ಭಾಷೆ.
- ★ ಧ್ಯಾನ ನಮ್ಮ ಮಾರ್ಗ.
- ★ ಈ ಪ್ರಪಂಚ ನಮ್ಮ ಆಶ್ರಮ.
- ★ ಇಡೀ ಸೃಷ್ಟಿಯೇ ನಮ್ಮ ಕುಟುಂಬ.
- ★ ದೇವರು ನಮ್ಮ ಗುರು ;
  ಋಷಿಗಳು ನಮ್ಮ ಮಾರ್ಗದರ್ಶಿಗಳು

# ತಪೋವಾಣಿ

ಸಂಪುಟ 18 ಸಂಚಿಕೆ 02 ಫೆಬ್ರವರಿ 2021 ರೂ.25

## ಅನಿಸಿಕೆಗಳು

**ಗುರೂಜಿ ಕೃಷ್ಣಾನಂದ**

**ಅನು: ಚಂಪಾ**

(ಹಿಂದಿನ ವಾರ್ತಾಪತ್ರಗಳಿಂದ ಆಯ್ದ ಭಾಗಗಳು – ಮಾರ್ಚ್ 2002ರ ಸಂಚಿಕೆ)

ಬೇಸಿಗೆ ಬಂದಿದೆ. ಗಾಳಿ ಚಲಿಸುತ್ತಿಲ್ಲ. ಮರಗಳ ನೆರಳು ನಮ್ಮನ್ನು ಆಹ್ವಾನಿಸುತ್ತವೆ, ನಮಗೆ ಸಾಂತ್ವನ ನೀಡುತ್ತವೆ.

ಹೊಸ ಋತು ಆರಂಭವಾಗಿದೆ. ಇಡೀ ಮನುಕುಲ ಶಾಂತಿಯುತ ಬೇಸಿಗೆಯ ಆಶಯದಿಂದ ಕಾಯುತ್ತಿದೆ. ನಾವು ಆಶಿಸೋಣ ಮತ್ತು ಪ್ರಾರ್ಥಿಸೋಣ.

ತಪೋನಗರದಲ್ಲಿ ಹೊಸ ಋತು ಹಾಗೂ ಅದ್ಭುತ ಆರಂಭಗಳ ಬಗ್ಗೆ ನಾನು ಮಾತನಾಡಿದಾಗ ಜನರು ನನ್ನನ್ನು ಸಂದೇಹದಿಂದ ನೋಡುತ್ತಾರೆ. ಇಲ್ಲಿ ಅಪರಿಪೂರ್ಣತೆಗಳಿವೆ ಎಂದು ನನಗೆ ತಿಳಿದಿದೆ. ನಾನು ಜನಗಳತ್ತ ನೋಡುವುದಿಲ್ಲ, ಬದಲಿಗೆ ಸಾಧ್ಯತೆಗಳತ್ತ ನೋಡುತ್ತೇನೆ; ಭವಿಷ್ಯದತ್ತ ನೋಡುತ್ತೇನೆ. ನಾನು, ಚೈತನ್ಯಗಳನ್ನು ಮತ್ತು ಅವು ಏನು ಮಾಡಬಹುದು ಎಂಬುದನ್ನು ನೋಡುತ್ತೇನೆ.

ನಾನು ಬೆಳಕನ್ನು ಮತ್ತು ಮುಂದಿನ ಪೀಳಿಗೆಗಳ ಜಾಗೃತ ಆತ್ಮಗಳನ್ನು ನೋಡುತ್ತೇನೆ. ನಾವು ಸದಾ ಭವಿಷ್ಯಕ್ಕಾಗಿ ಕೆಲಸ ಮಾಡುತ್ತೇವೆ ಮತ್ತು ವರ್ತಮಾನವು ಅದಕ್ಕೆ ಬಿಲ್ಡಿಂಗ್ ಬ್ಲಾಕ್ ಇದ್ದಂತೆ.

ಇಲ್ಲಿಗೆ ಬಂದು ವಾಸಿಸಲು ಸಾಹಸ ಮಾಡಿದವರು ಉತ್ತಮ ಆರಂಭಕ್ಕೆ ಕೊಡುಗೆ ನೀಡಿದ್ದಾರೆ. ಈಗ ಇತರರು ಕೊಡುಗೆ ನೀಡಬೇಕಾಗಿದೆ; ಧೈರ್ಯದಿಂದ ಕನಸಿನೊಳಕ್ಕೆ ಧುಮುಕಿ, ತಮ್ಮದೇ ಆದ ರೀತಿಯಲ್ಲಿ ಭಾಗವಹಿಸಬೇಕಾಗಿದೆ.

'ಬೆಳಕಿಗೆ ಬಾಗಿಲುಗಳು' ಪುಸ್ತಕ ಓದಿದ ಮೇಲೆ ಜನರು ಸಾಮಾನ್ಯವಾಗಿ ನನ್ನನ್ನು ಭೇಟಿ ಮಾಡಲು ಇಚ್ಛಿಸುತ್ತಾರೆ. ಅದು ಹೆಚ್ಚಾಗಿ ಕುತೂಹಲಕ್ಕಾಗಿರುತ್ತದೆ. ಜ್ಞಾನ ಮತ್ತು ಅನುಭವದ ನಿಜವಾದ ತೃಷೆಯಿಂದ ಜನರು ಬರುವುದು ಬಹಳ ವಿರಳ. ನಾನು ಸದಾ ಈ ಕೆಲವರನ್ನು ಭೇಟಿ ಮಾಡುತ್ತೇನೆ ಆದರೆ ಕುತೂಹಲಿಗಳನ್ನು ದೂರವಿರಿಸುತ್ತೇನೆ.

'ಬೆಳಕಿಗೆ ಬಾಗಿಲುಗಳು' ಪುಸ್ತಕದ ನಂತರ ಜನರು ನಮ್ಮ ಇತರ ಪುಸ್ತಕಗಳನ್ನು ಓದಿ, ಉತ್ತರಗಳನ್ನು ಹುಡುಕಿಕೊಳ್ಳಬೇಕು. ನಂತರ, ಉಳಿದ ಪ್ರಶ್ನೆಗಳೊಂದಿಗೆ ಇಲ್ಲಿಗೆ ಬರಬೇಕು.

ನಿರರ್ಥಕ ಮಾತುಕತೆ ಮತ್ತು ಚರ್ಚೆಗಳಲ್ಲಿ ನನ್ನನ್ನು ತೊಡಗಿಸಿಕೊಳ್ಳುವುದಕ್ಕಿಂತ, ಜನರು ಉನ್ನತ ಸತ್ಯಗಳನ್ನು ಅನುಭವಿಸುವಲ್ಲಿ ಮಾರ್ಗದರ್ಶನ ಮಾಡಲು ನನ್ನ ಶಕ್ತಿಯನ್ನು ವ್ಯಯಿಸಬಯಸುತ್ತೇನೆ.

ನಾನು ಲೌಕಿಕದಿಂದ ಹಿಂದಕ್ಕೆ ಸರಿಯುತ್ತಿದ್ದೇನೆ ಎಂದು ನನಗೆ ತಿಳಿದಿದೆ. ಹೆಚ್ಚು ಧ್ಯಾನ ಮಾಡುವುದಕ್ಕಾಗಿ, ಋಷಿಗಳಿಗೆ ಹತ್ತಿರವಾಗಿ, ಹೆಚ್ಚಿನ ಜ್ಞಾನ ಮತ್ತು ಚೈತನ್ಯಗಳನ್ನು ಕೆಳಗೆ ತರುವುದಕ್ಕಾಗಿ ಇದು ಅಗತ್ಯವಾಗಿದೆ. ನನ್ನ ಸುತ್ತಲಿನ ಜನರು ಅರ್ಥಮಾಡಿಕೊಳ್ಳುತ್ತಾರೆ ಎಂದು ನನಗೆ ತಿಳಿದಿದೆ. ನನ್ನ ವಿದ್ಯಾರ್ಥಿಗಳಿಗೆ ಸೂಕ್ಷ್ಮ ಮಟ್ಟದಲ್ಲಿ ಹೆಚ್ಚಿನ ಸಹಾಯ ಮತ್ತು ಮಾರ್ಗದರ್ಶನ ನೀಡಬಹುದೆಂದು ನಾನು ಕಂಡುಕೊಂಡಿದ್ದೇನೆ. ಇದು ಈಗಾಗಲೇ ಅನೇಕರ ಅನುಭವಕ್ಕೆ ಬಂದಿದೆ.

ಮತ್ತೊಂದು ಶಿವರಾತ್ರಿ; ಮತ್ತೊಮ್ಮೆ ಜಾಗರಣೆ. ಆದರೆ ಪರಮೇಶ್ವರ ಕೆಳಗೆ ಬರುತ್ತಾನೆ ಹಾಗೂ ಧ್ಯಾನದಲ್ಲಿ ನಾವು ಅವನೊಂದಿಗೆ ಸಂವಹನ ಮಾಡಬಹುದು ಮತ್ತು ಅವನ ಅನುಭವ ಹೊಂದಬಹುದು ಎನ್ನುವುದು ಎಷ್ಟು ಜನರಿಗೆ ತಿಳಿದಿದೆ?

ನಾವು ಬುದ್ಧಿಶಕ್ತಿಯನ್ನು ಬದಿಗಿರಿಸಿ ವಾಸ್ತವತೆಯ ಆಧ್ಯಾತ್ಮದ ಆಳಕ್ಕಿಳಿಯಬೇಕು. ನಾವು ಎಚ್ಚರಗೊಳ್ಳಬೇಕು. ■

ಮಾನಸ ಫೌಂಡೇಶನ್ (ರಿ)
ತಪೋನಗರ, ಚಿಕ್ಕಗುಬ್ಬಿ, (ಹೆಣ್ಣೂರು–ಬಾಗಲೂರು ರೋಡ್) ಬೆಂಗಳೂರು ಅರ್ಬನ್ – 560077. ಭಾರತ.
✆ 99000 75280 (ಬೆಳಗ್ಗೆ 10ರಿಂದ ಸಂಜೆ 5)
ಇ–ಮೇಲ್: info@lightagemasters.com ವೆಬ್‌ಸೈಟ್: www.lightagemasters.com

# ಧ್ಯಾನದ ತರಗತಿಗಳು

ಬೆಂಗಳೂರು ನಗರದ ಎಲ್ಲಾ ಕೇಂದ್ರಗಳಲ್ಲಿನ ಧ್ಯಾನದ ತರಗತಿಗಳನ್ನು ರದ್ದುಗೊಳಿಸಲಾಗಿದೆ. ಕೋವಿಡ್ ಹರಡುವಿಕೆ ಹಾಗೂ ಅದರ ಲಸಿಕೆ ಅಥವಾ ಔಷಧಿ ಲಭ್ಯವಾಗಲು ಬೇಕಾಗಬಹುದಾದ ಸಮಯವನ್ನು ಗಮನದಲ್ಲಿರಿಸಿಕೊಂಡು, ಬೆಂಗಳೂರು ನಗರದ ಕೇಂದ್ರಗಳಲ್ಲಿನ ತರಗತಿಗಳನ್ನು ಮಾರ್ಚ್ 2021ನೇ ಇಸವಿಯವರೆಗೆ ನಡೆಸಲಾಗುವುದಿಲ್ಲ ಎಂದು ನಿರ್ಧರಿಸಲಾಗಿದೆ. ಏಪ್ರಿಲ್ 2021 ರಿಂದ, ಅಂದಿನ ಪರಿಸ್ಥಿತಿಯನ್ನು ಅವಲೋಕಿಸಿ, ತರಗತಿಗಳನ್ನು ಪುನರಾರಂಭಿಸುವ ಬಗ್ಗೆ ನಿರ್ಧರಿಸಲಾಗುತ್ತದೆ.


ಭಾನುವಾರದ ತರಗತಿಗಳು ವೆಬ್ ಕಾಸ್ಟ್ ಮೂಲಕ ಆನ್ ಲೈನ್‌ನಲ್ಲಿ ಮುಂದುವರಿಯುತ್ತದೆ. ಪ್ರತಿ ಭಾನುವಾರ ಬೆಳಿಗ್ಗೆ 10ರಿಂದ 11ರವರೆಗೆ ಪ್ರಾಥಮಿಕ ತರಗತಿಗಳನ್ನು ಕೂಡ ಆನ್ ಲೈನ್‌ನಲ್ಲಿ ನಡೆಸಲಾಗುತ್ತದೆ. ಪ್ರತಿ ತಿಂಗಳ ಮೊದಲನೇ ಭಾನುವಾರ ಹೊಸ ಬ್ಯಾಚ್ ಶುರುವಾಗುತ್ತದೆ.

**ಹೊರಗಿನ ಸಾಧಕರಿಗೆ ಅಂಚೆ ಮತ್ತು ಇ-ಮೇಲ್‌ಗಳ ಮೂಲಕ ಧ್ಯಾನದ ತರಗತಿಗಳು ಲಭ್ಯವಿವೆ. ಹೆಚ್ಚು ಮಾಹಿತಿಗಾಗಿ ಆರನೇ ಪುಟದ ಮೊದಲನೇ ಕಾಲಂ ನೋಡಿ.**

**ಡೋರ್‌ವೇಸ್ (ಇಂಗ್ಲಿಷ್)/ತಪೋವಾಣಿ (ಕನ್ನಡ)**
**ಪ್ರಕಾಶ್‌ಮಾರ್ಗ್ (ಮರಾಠಿ)**
**ವಾರ್ತಾಪತ್ರದ ವಾರ್ಷಿಕ ಚಂದಾ ರೂ. 300/-ಡಿಡಿಯನ್ನು**
**'Manasa Light Age Foundation'**
**ಹೆಸರಿನಲ್ಲಿ ಕಳುಹಿಸಬೇಕು.**
**ಮನಿಯಾರ್ಡರ್‌ಗಳನ್ನು ಸ್ವೀಕರಿಸುವುದಿಲ್ಲ.**

## ಮಾಸ ಪತ್ರಿಕೆ

**ನಿಮ್ಮ ಸ್ನೇಹಿತರಿಗೆ ತಪೋವಾಣಿಯನ್ನು ಉಡುಗೊರೆಯಾಗಿ ಕೊಡಿ. ವಾರ್ಷಿಕ ಚಂದಾ ದೊಂದಿಗೆ ಅವರ ಹೆಸರು ಮತ್ತು ವಿಳಾಸವನ್ನು ನಮಗೆ ಕಳುಹಿಸಿ.**




## ಸುದ್ದಿ-ಸೂಚನೆಗಳು

- ಫೆಬ್ರವರಿ 1ನೇ ತಾರೀಕು "ದಿ ವರ್ಲ್ಡ್ ಚಾನೆಲ್ಸ್ ಡೇ" ಆಗಿ ಆಚರಿಸಲಾಗುತ್ತದೆ. ಲೈಟ್ ಚಾನೆಲಿಂಗ್ ಸೆಷನ್‌ಗಳನ್ನು ಮಾನಸ ಫೌಂಡೇಶನ್‌ನ ಧ್ಯಾನ ಮಂದಿರದಲ್ಲಿ ನಡೆಸಲಾಗುತ್ತದೆ. www.lightagemasters.com/WCD2021-Live ನಲ್ಲಿ ಲೈವ್ ವೆಬ್‌ಕಾಸ್ಟ್ ಲಭ್ಯವಿರುತ್ತದೆ. ಕೆಳಕಂಡಂತೆ ಮೂರು ಸೆಷನ್‌ಗಳು ಇರುತ್ತವೆ:

  ಬೆಳಿಗ್ಗೆ 8 ಗಂಟೆಗೆ (ಭಾರತ ಸಮಯ) – ಇಂಗ್ಲಿಷ್‌ನಲ್ಲಿ

  ಮಧ್ಯಾಹ್ನ 12 ಗಂಟೆಗೆ (ಭಾರತ ಸಮಯ) – ಹಿಂದಿಯಲ್ಲಿ

  ರಾತ್ರಿ 9 ಗಂಟೆಗೆ (ಭಾರತ ಸಮಯ) – ಇಂಗ್ಲಿಷ್‌ನಲ್ಲಿ

  ಮೇಲ್ಕಂಡ ಯಾವುದಾದರೂ ಅಥವಾ ಎಲ್ಲಾ ಸೆಷನ್‌ಗಳಲ್ಲೂ ನೀವು ನಮ್ಮನ್ನು ಸೇರಿ, ಪ್ರಪಂಚಕ್ಕೆ ಹೆಚ್ಚು ಬೆಳಕನ್ನು ಚಾನೆಲ್ ಮಾಡುವಂತಹ ಶ್ರೇಷ್ಠವಾದ ಪ್ರಯತ್ನದಲ್ಲಿ ಭಾಗವಹಿಸಬಹುದು. ನಿಮಗೆ ಅನುಕೂಲಕರವಾದ ಯಾವುದೇ ಸಮಯದಲ್ಲಿ 7 ನಿಮಿಷಗಳ ಕಾಲ ಲೈಟ್ ಚಾನೆಲ್ ಮಾಡುವುದರ ಮೂಲಕವೂ ಸಹ ನೀವು ನಮ್ಮೊಂದಿಗೆ ಸೇರಬಹುದು.
- ಮಹರ್ಷಿ ಅಮರರವರ ಜನ್ಮ ದಿನವನ್ನು ಫೆಬ್ರವರಿ 7ರಂದು ಆಚರಿಸಲಾಗುತ್ತದೆ. ಪ್ರಸಕ್ತ ಕೋವಿಡ್ ಪರಿಸ್ಥಿತಿಯಿಂದಾಗಿ, ತಪೋನಗರದಲ್ಲಿ ಭೌತಿಕ ಸಭೆ ಸೇರುವುದಕ್ಕೆ ಸಾಧ್ಯವಾಗುವುದಿಲ್ಲ. ವಿದ್ಯಾರ್ಥಿಗಳು ನೇರ ವೆಬ್‌ಕಾಸ್ಟ್ ಮೂಲಕ ಭಾಗವಹಿಸಬಹುದು.
- ಸುಮಾರು 50 ಸಾಧಕರು ಡಿಸೆಂಬರ್ 27, 2020ರಂದು ಅಖಂಡ ಧ್ಯಾನದಲ್ಲಿ ಪ್ರಪಂಚಕ್ಕೆ ಲೈಟ್ ಚಾನಲ್ ಮಾಡುವ ಮೂಲಕ ಭಾಗವಹಿಸಿದರು. ಇನ್ನೂ ಅನೇಕರು ತಮ್ಮ ತಮ್ಮ ಸ್ಥಳಗಳಿಂದ ತಪೋನಗರಕ್ಕೆ ಮಾನಸಿಕವಾಗಿ ಸಂಪರ್ಕಗೊಂಡು ಲೈಟ್ ಚಾನಲ್ ಮಾಡುವ ಮೂಲಕ ಭಾಗವಹಿಸಿದರು.
- 2021ನೇ ವರ್ಷದ ಮೊದಲನೇ ಶಂಬಲ ಗ್ರೂಪ್‌ನ ಸಭೆ ವೆಬ್‌ಕಾಸ್ಟ್ ಮೂಲಕ 10ನೇ ಜನವರಿ 2021ರಂದು ನಡೆಯಿತು ಹಾಗೂ ರಾ ಗ್ರೂಪ್‌ನ ಸಭೆ 17ನೇ ಜನವರಿ 2021ರಂದು ನಡೆಯಿತು.

## ಧ್ಯಾನಕ್ಕೆ ವಿಶೇಷ ದಿನಗಳು

| | | |
|---|---|---|
| 01 | ಸೋಮ | ಮಹರ್ಷಿ ಅಮರರವರ ಜನ್ಮ ದಿನೋತ್ಸವ<br>ವರ್ಲ್ಡ್ ಚಾನೆಲ್ಸ್ ದಿನ |
| 05 | ಶುಕ್ರ | ಕೃಷ್ಣ ಅಷ್ಟಮಿ |
| 07 | ಭಾನು | ಅಮರ ಜಯಂತಿ ಆಚರಣೆ |
| 10 | ಬುಧ | ಮಾಸ ಶಿವರಾತ್ರಿ |
| 11 | ಗುರು | ಅಮಾವಾಸ್ಯೆ |
| 19 | ಶುಕ್ರ | ರಥ ಸಪ್ತಮಿ |
| 20 | ಶನಿ | ಶುಕ್ಲ ಅಷ್ಟಮಿ |
| 22 | ಸೋಮ | ಶುಕ್ಲ ದಶಮಿ |
| 27 | ಶನಿ | ಪೂರ್ಣಿಮ |

## ಈ ತಿಂಗಳು ತಪೋನಗರದಲ್ಲಿ

ಸದ್ಯದಲ್ಲಿ ಎಲ್ಲಾ ಕಾರ್ಯಕ್ರಮಗಳನ್ನು ವರ್ಚುವಲ್‌ಆಗಿ ವೆಬ್‌ಕಾಸ್ಟ್ ಮೂಲಕ ನಡೆಸಲಾಗುತ್ತಿದೆ ಮತ್ತು ಸದ್ಯಕ್ಕೆ ತಪೋನಗರದಲ್ಲಿ ಯಾವುದೇ ರೀತಿಯ ಭೌತಿಕ ಸಭೆಗಳು ಇರುವುದಿಲ್ಲ.

ಭಾನುವಾರಗಳು : ಉಪನ್ಯಾಸಗಳು :
ಬೆಳಿಗ್ಗೆ 11ರಿಂದ ಮಧ್ಯಾಹ್ನ 12
ಲೈಟ್ ಚಾನೆಲಿಂಗ್:
ಮಧ್ಯಾಹ್ನ 12 ರಿಂದ 1

## ಮಹರ್ಷಿ ಅಮರ ಜಯಂತಿ ಕಾರ್ಯಕ್ರಮ

**ಭಾನುವಾರ, 07-02-2021**

ಬೆಳಿಗ್ಗೆ 11-00 ಸ್ವಾಗತ
ಮಾತುಗಳು
ವಿಶೇಷ ಧ್ಯಾನ

ಗುರೂಜಿಯವರ ಬ್ಲಾಗ್ ಓದಲು ಮತ್ತು ಅವರ ವಿಡಿಯೋಗಳನ್ನು ವೀಕ್ಷಿಸಲು ದಯವಿಟ್ಟು www.speakingtree.inಗೆ ಭೇಟಿ ಕೊಡಿ.

ಧ್ಯಾನಿಗಳಿಗೆ ಭಾನುವಾರದ ತರಗತಿಗಳ ವೆಬ್‌ಕಾಸ್ಟ್ ನೇರಪ್ರಸಾರ ಲಭ್ಯವಿದೆ. ಇದರ ವಿವರಗಳಿಗೆ ದಯವಿಟ್ಟು ಇ-ಮೇಲ್ ಮೂಲಕ ಮಾನಸ ಕಛೇರಿಯನ್ನು ಸಂಪರ್ಕಿಸಿ.

## ಅತೀಂದ್ರಿಯ ಮಾಸ್ಟರ್

**ಮನೋಜ್ ಭೋಪ್ರಾ; ಅನು: ಕಾಂಚನಲತಾ**

ಮಹರ್ಷಿ ಅಮರರವರು ಸತತವಾಗಿ ವಿಭಿನ್ನ ಭೂಮಿಗಳಿಗೆ ಮತ್ತು ನಕ್ಷತ್ರ ಪುಂಜಗಳಿಗೆ (ಗ್ಯಲಾಕ್ಸಿ) ಅವರ ಸೂಕ್ಷ್ಮ ಶರೀರದಲ್ಲಿ ಪ್ರಯಾಣಿಸಿದ್ದಾರೆ. ಋಷಿಗಳಿಂದ ಅವರಿಗೆ ನಿಯೋಜಿತವಾದ ಅನೇಕ ಕಷ್ಟಕರವಾದ ಮತ್ತು ಸಂವೇದನಾಶೀಲ ಕಾರ್ಯಗಳನ್ನು ಅವರು ನಿರ್ವಹಿಸಿದರು. ಅವರು ಒಬ್ಬ ಶ್ರೇಷ್ಠವಾದ ಋಷಿ ಕಾರ್ಯಕರ್ತರಾಗಿದ್ದರು. ಗುರೂಜಿ ಹೇಳುತ್ತಿದ್ದರು, ಅವರ ಕೆಲಸಗಳು ಭವಿಷ್ಯದ ಪುರಾಣಗಳಾಗುತ್ತವೆಂದು. ಹೀಗಿದ್ದರೂ, ಅವರು ನಮ್ಮೆಲ್ಲರಂತೆ ಒಂದು ಸಾಮಾನ್ಯ ಜೀವನ ನಡೆಸಿದವರು. ಅವರು ಮಕ್ಕಳೊಂದಿಗೆ ಕ್ರಿಕೆಟ್ ಆಟ ಆಡುವುದನ್ನು ಆನಂದಿಸುತ್ತಿದ್ದರು. ಅವರು ಸಮತೋಲನ ಜೀವನಕ್ಕೆ ಒಂದು ಪರಿಪೂರ್ಣ ಉದಾಹರಣೆಯಾಗಿದ್ದರು.

ಅವರಿಗೆ ತಪೋನಗರದ ಒಂದು ದೂರದೃಷ್ಟಿ ಇತ್ತು ಮತ್ತು ನಾವೆಲ್ಲರೂ ಅವರ ದೂರದೃಷ್ಟಿಯ ಒಂದು ಭಾಗ. ತಪೋನಗರ ಭೂಮಿಯ ಮೇಲಿನ ಶಂಬಲದಂತೆ ಆಗಿ, ನಾವೆಲ್ಲರೂ ಋಷಿಗಳಂತೆ ಆಗುವವರೆಗೆ ಅವರ ಜೀವಿತದ ಧ್ಯೇಯ ಪೂರ್ಣಗೊಳ್ಳುವುದಿಲ್ಲ. ಅಮರಾಜಿ ಅವರಿಗೆ ಈ ಬದಲಾವಣೆಯ ಸಮಯದಲ್ಲಿ, ಭೂಮಿಯ ಮೇಲೆ ಒಂದು ಗುರುತರವಾದ ಕರ್ತವ್ಯವಿದೆ. ಅವರು ಎಲ್ಲರ ವೈಯಕ್ತಿಕ ಮಟ್ಟದಲ್ಲಿ ಮತ್ತು ಭೌಗೋಳಿಕ ಮಟ್ಟದಲ್ಲಿ ಆಗುತ್ತಿರುವ ಪ್ರಮುಖವಾದ ಬದಲಾವಣೆಗಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ.

ಅವರನ್ನು ಶಾರೀರಿಕವಾಗಿ ನೋಡಲು ನಮಗೆ ಅವಕಾಶವಿರಬೇಕಿತ್ತು ಎಂದು ನಾವು ಆಶಿಸುತ್ತೇವೆ. ಆದರೆ ಅಮರಾಜಿ ಅವರು ನಮ್ಮೆಲ್ಲರಿಗೂ ಉನ್ನತ ಮಟ್ಟದಲ್ಲಿ ತಲುಪಬಲ್ಲವರಾಗಿದ್ದಾರೆ. ಅವರು ಒಂದು ಆಲೋಚನೆಯಷ್ಟೇ ದೂರವಿದ್ದಾರೆ. ನಮ್ಮ ಎಲ್ಲಾ ಕಷ್ಟಗಳಲ್ಲೂ ಸಹಾಯ ಮಾಡಲು ತಯಾರಿದ್ದಾರೆ. ನಾವು ಬೆಳೆಯಲಿ ಅಥವಾ ಬಿಡಲಿ, ನಾವು ಅವರ ಒಂದು ಭಾಗವಾಗಿದ್ದೇವೆ. ಅವರ ಪ್ರೀತಿಯನ್ನು ಮಾನವ ಮಟ್ಟದಲ್ಲಿ ಅರಿಯಲು ಸಾಧ್ಯವಿಲ್ಲ. ಗುರೂಜಿಯವರಂತೆಯೇ, ಅವರಿಗೆ ಯಾರ ವಿರುದ್ಧವೂ ಯಾವುದೇ ದೂರು ಇಲ್ಲ. ಅವರು ಯಾವಾಗಲೂ ಹೇಳುತ್ತಿದ್ದರು, "ನಾನು ನನ್ನ ಕರ್ತವ್ಯವನ್ನು ಮಾಡಿದ್ದೇನೆ. ಉಳಿದದ್ದು ಜನರಿಗೆ ಬಿಟ್ಟಿದ್ದು, ನನ್ನನ್ನು ಒಪ್ಪಿಕೊಳ್ಳುವುದು ಅಥವಾ ಬಿಡುವುದು" ಎಂದು.

ಮಹರ್ಷಿ ಅಮರರವರು, ಮಾನಸದಲ್ಲಿ ನಡೆಯುವ ಚಟುವಟಿಕೆಗಳ ಹಿಂದಿರುವ ಪ್ರೇರಕಶಕ್ತಿ. ಅವರು ವಿಶ್ವ ಚಾನೆಲ್ಸ್ ದಿನದ ಹಿಂದಿರುವ ಸ್ಫೂರ್ತಿ. ಪ್ರತಿ ವರ್ಷ, ಮಾನಸ ಫೌಂಡೇಶನ್, ಭಾರತದಾದ್ಯಂತ ಅನೇಕ ವಿದ್ಯಾ ಸಂಸ್ಥೆಗಳಲ್ಲಿ ಲೈಟ್ ಚಾನೆಲಿಂಗ್ ಸೆಷನ್‌ಗಳನ್ನು ವ್ಯವಸ್ಥೆಗೊಳಿಸುವ ಮೂಲಕ, ಅಮರಾಜಿ ಅವರ ಹುಟ್ಟುಹಬ್ಬವನ್ನು ಆಚರಿಸುತ್ತದೆ. ಈ ವರ್ಷ, ಮಾನಸ ಫೌಂಡೇಶನ್‌ನಲ್ಲಿ ಜರುಗುವ ಲೈಟ್ ಚಾನೆಲಿಂಗ್ ಸೆಷನ್‌ಅನ್ನು ಇಡೀ ಪ್ರಪಂಚಕ್ಕೆ ವೆಬ್‌ಕಾಸ್ಟ್ ಮಾಡುವ ಮೂಲಕ ನಾವು ಇನ್ನೊಂದು ಹೆಜ್ಜೆ ಮುಂದಿಡುತ್ತಿದ್ದೇವೆ. ಇದು ಅವರಿಗೆ ಒಂದು ವಿಶೇಷವಾದ ಉಡುಗೊರೆ.

ಅವರ ಉದ್ದೇಶ ಪೂರ್ಣವಾಗಿಲ್ಲ; ಇಲ್ಲಿಯವರೆಗೂ. ಅವರು ತಮ್ಮ ಉದ್ದೇಶ ಪೂರ್ಣಗೊಳಿಸಲು ಮತ್ತೊಮ್ಮೆ ಬರುವುದಾಗಿ ಭರವಸೆ ಕೊಟ್ಟಿದ್ದಾರೆ. ಅವರನ್ನು ಅಭಿವ್ಯಕ್ತಿಸುವ ಮೂಲಕ, ಪ್ರೀತಿ, ಶಾಂತಿ ಮತ್ತು ವಿಶ್ವಾಸಗಳನ್ನು ಅಭಿವ್ಯಕ್ತಿಸುವ ಮೂಲಕ ಅವರ ಉದ್ದೇಶ ಪೂರ್ಣಮಾಡುವಲ್ಲಿ ನಾವೆಲ್ಲರೂ ಭಾಗಿಯಾಗೋಣ. ■

## ಅಮರ – ನಮ್ಮ ದಾರಿ ದೀಪ

**ಸುನಿಲ್ ಬಿಸರಹಳ್ಳಿ; ಅನು: ಕಾಂಚನಲತಾ**

ಅನೇಕ ಬಾರಿ, ನಾವು ತೆಗೆದುಕೊಂಡ ನಿರ್ಧಾರಗಳ ಅಗಾಧತೆಯ ಅರಿವು ನಮಗೆ ಇರುವುದಿಲ್ಲ. ಅದೇ ರೀತಿಯಲ್ಲಿ, ನಮ್ಮ ಜೀವನದಲ್ಲಿ ಬದಲಾವಣೆ ಬೇಕೆನಿಸಿದಾಗ, ನಾವು ಧ್ಯಾನವನ್ನು ಪ್ರಾರಂಭಿಸುತ್ತೇವೆ. ನಮಗೇ ಅರಿವಿಲ್ಲದಂತೆ, ಗುರೂಜಿ, ಅಮರ ಮತ್ತು ಋಷಿಗಳು ನಮ್ಮ ಜೀವನದ ಒಂದು ಅಂಗವಾಗಿಬಿಡುತ್ತಾರೆ ಮತ್ತು ಒಂದು ವಿನೂತನ ಜಗತ್ತು ನಮಗಾಗಿ ತೆರೆದುಕೊಳ್ಳುತ್ತದೆ.

ಅಮರರವರು ನಮ್ಮ ಜೀವನವನ್ನು ಪ್ರವೇಶಿಸುವುದು ನಮಗೆ ಆಗುವ ಒಂದು ಅತ್ಯುತ್ತಮ ಸಂಗತಿ. ಅವರು ತಮ್ಮೊಂದಿಗೆ ನಮ್ಮ ಋಷಿಗಳ ಪರಂಪರೆಯನ್ನು, ಅನಾದಿ ಕಾಲದ ಜ್ಞಾನವನ್ನು, ಸಂಪೂರ್ಣವಾಗಿ ಸರಳಗೊಳಿಸಿದ ತಂತ್ರಗಳನ್ನು ಮತ್ತು ನಮ್ಮ ಗುರಿಗಳನ್ನು ತಲುಪಲು ಒಂದು ನಿರ್ದಿಷ್ಟವಾದ ಮಾರ್ಗವನ್ನು ತರುತ್ತಾರೆ.

ಅಮರರವರು, ಒಂದು ದೀಪದ ಬೆಳಕಿನ ಮೃದುತ್ವ ಅಥವಾ ಒಂದು ಸಾವಿರ ಸೂರ್ಯರ ಪ್ರಖರತೆ, ಎರಡೂ ಆಗಬಲ್ಲರು. ಅವರು ದೇವರೊಂದಿಗೆ ಮಾತನಾಡಬಲ್ಲರು, ಋಷಿಗಳಿಗಾಗಿ ಕೆಲಸ ಮಾಡುವರು, ನ್ಯಾಯಾಲಯದ ಮೊಕದ್ದಮೆಗಳನ್ನು ನೋಡಿಕೊಳ್ಳುವರು ಮತ್ತು ಒಂದು ಕಪ್ ಚಹಾದೊಂದಿಗೆ ಕ್ರಿಕೆಟ್ ಆಟವೊಂದನ್ನು ಅಸ್ವಾದಿಸುವರು.

ಅವರು ಎಂದೂ ಖ್ಯಾತಿಯನ್ನು ಇಷ್ಟಪಡಲಿಲ್ಲ. ಅವರು ತೆರೆಯ ಹಿಂದೆ ನಿಂತು ಕೆಲಸ ಮಾಡಿ ಎಲ್ಲಾ ಮನ್ನಣೆಯನ್ನು ಋಷಿಗಳಿಗೆ ಮತ್ತು ದೇವರಿಗೆ ನೀಡಿದರು. ಅವರು ವಿನಮ್ರತೆಯಿಂದ ಹೇಳುತ್ತಿದ್ದರು, "ನಾನೊಬ್ಬ ಋಷಿಗಳ ಸೇವಕ" ಎಂದು. ಅವರ ಈ ಅದ್ಭುತವಾದ ಗುಣದಿಂದ, ಸೂಕ್ಷ್ಮ ಜಗತ್ತಿನಲ್ಲಿರುವ ಪ್ರತಿಯೊಬ್ಬರಿಂದಲೂ ಅಪೂರ್ವವಾದ ಗೌರವವನ್ನು ಗಳಿಸಿದ್ದರು.

ಏಕನಾಥರಾಗಿ ಅಥವಾ ಅಮರರಾಗಿ, ಜ್ಞಾನವನ್ನು ಸರಳಗೊಳಿಸಿ, ಅದನ್ನು ಸಾಮಾನ್ಯ ಮಾನವನ ಬಳಿ ತರುವುದರಲ್ಲಿ ಅವರು ಮಾಸ್ಟರ್ ಆಗಿದ್ದರು. ನಾವು ನಿಮ್ಮೊಂದಿಗೆ ಮಾಡುವ ಹಾಗೆ ನೀವು ಅಮರರವರೊಂದಿಗೆ ಎಂದಾದರೂ ಹಾಸ್ಯ ಮಾಡಿದ್ದಿರಾ ಎಂದು ಒಮ್ಮೆ ನಾನು ಗುರೂಜಿಯವರನ್ನು ಕೇಳಿದಾಗ ಅದಕ್ಕೆ ಅವರು ಹೇಳಿದರು, "ನಾವು ಅವರೊಂದಿಗೆ ಎಂದೂ ಹಾಸ್ಯ ಮಾಡಲಿಲ್ಲ. ಅವರು ದೇವರ ಬಗ್ಗೆ ಮತ್ತು ಋಷಿಗಳ ಬಗ್ಗೆ ಮಾತನಾಡುವಾಗ ಬಹಳ ಗಂಭೀರವಾಗಿರುತ್ತಿದ್ದರು. ನಾವು ಅವರಿಗೆ ಹೆದರುತ್ತಿದ್ದೆವು."

ಅವರು ಎಂದೂ ಉದ್ದೇಶವಿಲ್ಲದ ಅಥವಾ ಲಘುವಾದ ಮಾತುಗಳನ್ನು ಆಡುತ್ತಿರಲಿಲ್ಲ. ಸದಾ ಋಷಿಗಳ ಬಗ್ಗೆ, ದೇವರ ಬಗ್ಗೆ ಮತ್ತು ಆಧ್ಯಾತ್ಮದ ಕುರಿತಾಗಿ ಮಾತನಾಡುತ್ತಿದ್ದರು. ಅವರು, "ಆಧ್ಯಾತ್ಮದ ಕೊಡೆಯಡಿ ಆಶ್ರಯ ಪಡೆಯಿರಿ" ಎಂದು ಕೂಡ ಹೇಳಿದ್ದರು. ಅಮರರವರ ಆಶ್ರಯದಲ್ಲಿರುವ ನಾವೆಲ್ಲರೂ ಧನ್ಯರು.

ಅಮರರವರು ನಮ್ಮ ಮೇಲೆ ಸುರಿಸಿರುವ ಶಕ್ತಿ, ಜ್ಞಾನ, ಪ್ರೀತಿ ಮತ್ತು ರಕ್ಷಣೆಯಿಂದಾಗಿ, ಪಿಡುಗಿನ ಸಮಯದ ಕಷ್ಟ ಕಾಲದಲ್ಲಿಯೂ ನಾವು, ಹಾಡಿ, ಕುಣಿದು ನಕ್ಕು ನಲಿದಾಡಿದ್ದೇವೆ. ಅಮರರವರು ನಮ್ಮ ಜೀವನಕ್ಕೆ ಕೊಟ್ಟಿರುವುದು ಅಳತೆಗೆ ಮೀರಿದ್ದು. ■

## ಲೈಟ್ ಚಾನಲ್ಸ್
## ವಿಶ್ವ ಸಂಚಲನ

ಇದು, ಈ ಪ್ರಪಂಚವನ್ನು ಬೆಳಕು, ಶಾಂತಿ ತುಂಬಿರುವ ಒಂದು ಸುಂದರ ಪ್ರದೇಶವನ್ನಾಗಿ ಮಾಡುವುದಕ್ಕಾಗಿ ಆತ್ಮಪ್ರಜ್ಞೆಯಲ್ಲಿ ನಡೆಯುವ ಒಂದು ಸಂಚಲನ. ಭಾಷಣಗಳು, ಬಾವುಟಗಳಿಲ್ಲದ, ಬೆಳಕನ್ನು ಚಾನಲ್ ಮಾಡಿದರಷ್ಟೇ ಸಾಕಾಗುವ ಒಂದು ಸಂಚಲನ. ಪದಗಳು ಮಾಡಲಾಗದ ಎಲ್ಲವನ್ನೂ ಬೆಳಕೇ ಮಾಡುತ್ತದೆ.

ನಾವು ಚಾನಲ್ ಮಾಡಿ ಬೆಳಕನ್ನು ಹರಡಿದಾಗ, ಅದು ಬೇರೆಯವರ ಹೃದಯಗಳನ್ನು ಮತ್ತು ಮನೆಗಳನ್ನು ಪ್ರವೇಶಿಸುತ್ತದೆ ಮತ್ತು ಆಲೋಚನೆಗಳು ಮತ್ತು ಭಾವನೆಗಳಲ್ಲಿರುವ ಕತ್ತಲನ್ನು ಪರಿವರ್ತಿಸುತ್ತದೆ. ವ್ಯಕ್ತಿಗಳೊಂದಿಗೆ ಪ್ರಪಂಚವೂ ಪರಿವರ್ತನೆಗೊಳ್ಳುತ್ತದೆ.

ಇದು ಭೌತಿಕ ಬೆಳಕಲ್ಲ, ಆದರೆ ಇದು, ಯಾವುದರಿಂದ ಇಡೀ ಸೃಷ್ಟಿ ಬಂದಿದೆಯೋ ಆ ಅತಿ ಸೂಕ್ಷ್ಮ ಬೆಳಕು. ಈ ಬೆಳಕಿನಲ್ಲಿ ಎಲ್ಲವೂ ಇದೆ – ಶಕ್ತಿ, ವಿವೇಕ ಮತ್ತು ಭವಿಷ್ಯ. ಈ ಬೆಳಕು ಕಾಣುವುದಿಲ್ಲ, ಆದರೆ ಎಲ್ಲಾ ಕಡೆ ಇದೆ.

ನಾವು ಪ್ರತಿದಿನ ಎದ್ದಾಗ ಮತ್ತು ಮಲಗುವಾಗ 7 ನಿಮಿಷಗಳ ಕಾಲ ಈ ಬೆಳಕನ್ನು ಚಾನಲ್ ಮಾಡಿ ಹರಡೋಣ. ಹರಡಿ ಪ್ರಪಂಚದಲ್ಲಿ ಪರಿವರ್ತನೆಯನ್ನು ತರೋಣ.

ಚಾನಲ್ ಮಾಡಿ ಬೆಳಕನ್ನು ಹರಡುವುದಕ್ಕಾಗಿ, ನಿಮ್ಮ ಮೇಲೆ ಬೆಳಕಿನ ಸಾಗರವೊಂದನ್ನು ಕಲ್ಪಿಸಿಕೊಳ್ಳಿ, ನಂತರ ಈ ಸಾಗರದಿಂದ ಬೆಳಕಿನ ದಪ್ಪ ಕಿರಣವೊಂದು ಕೆಳಬಂದಂತೆ ಕಲ್ಪಿಸಿಕೊಳ್ಳಿ, ಈ ಬೆಳಕು ನಿಮ್ಮನ್ನು ಪ್ರವೇಶಿಸಿ ನಿಮ್ಮ ದೇಹವನ್ನು ಸಂಪೂರ್ಣವಾಗಿ ತುಂಬುತ್ತಿದೆಯೆಂದು ಕಲ್ಪಿಸಿಕೊಳ್ಳಿ, ಒಂದು ನಿಮಿಷ ಈ ಬೆಳಕನ್ನು ಅನುಭವಿಸಿ. ನಂತರ ಈ ಬೆಳಕು ನಿಮ್ಮ ದೇಹದಿಂದ ಹೊರಬಂದು ನಿಧಾನವಾಗಿ ಸುತ್ತಲೂ ಹರಡುತ್ತಾ, ನಿಮ್ಮ ಮನೆ, ಪ್ರದೇಶ, ದೇಶ ಮತ್ತು ಇಡೀ ಪ್ರಪಂಚವನ್ನು ತುಂಬುತ್ತಿದೆ ಎಂದು ಕಲ್ಪಿಸಿಕೊಳ್ಳಿ.

ಈ ಸಂಚಲನವನ್ನು 18–5–2008 ರಂದು, ಗುರೂಜಿ ಕೃಷ್ಣಾನಂದರವರ ಮೂಲಕ, ಸಪ್ತಋಷಿಗಳು ಪ್ರಾರಂಭಿಸಿದರು.

ಈ ಸಂದೇಶವನ್ನು ಎಲ್ಲರಿಗೂ ಹರಡಿ.

www.lightchannels.comಗೆ ಭೇಟಿ ನೀಡಿ.

## ಶಂಬಲದ ನಿಯಮಗಳು

**ಈ ಏಳು ನಿಯಮಗಳನ್ನು ಶಂಬಲದಲ್ಲಿ ವಾಸಿಸುತ್ತಿರುವ ಜನರು ಅಭ್ಯಾಸ ಮಾಡುತ್ತಾರೆ. ಅವರು ಶಾಂತಿ–ಪೂರ್ಣತೆಗಳಿಂದ, ವೃದ್ಧಾಪ್ಯ ಬಾರದೆ ಯಾವಾಗಲೂ ಯೌವನದಲ್ಲಿಯೇ ಬದುಕುತ್ತಾರೆ.**

1. ನಮ್ಮೊಳಗಿರುವ ಬೆಳಕನ್ನು ಅನುಭವಿಸಿ, ಹೊರಗೆ ತಂದು ಹರಡುವುದು.
2. ಪ್ರೀತಿಯನ್ನು ಅನುಭವಿಸಿ ಸುತ್ತಲೂ ಹರಡುವುದು.
3. ಎಲ್ಲರಲ್ಲಿಯೂ ಮತ್ತು ಎಲ್ಲದರಲ್ಲಿಯೂ ಇರುವ ಚೈತನ್ಯವನ್ನು ಅನುಭವಿಸುವುದು.
4. ದಿನ ನಿತ್ಯದ ಚಟುವಟಿಕೆಗಳನ್ನು ಮೊದಲು ಮನಸ್ಸಿನಲ್ಲಿ ನೆನೆದು, ನಂತರ ಅವುಗಳನ್ನು ಪಿಸುಮಾತಿನಲ್ಲಿ ಹೇಳಿ ಅನಂತರ ಕಾರ್ಯಗತ ಮಾಡುವುದು.
5. ಯಾವುದೇ ಗುರಿಯನ್ನು ಸಾಧಿಸುವ ಮೊದಲು, ಅದರ ಬಗ್ಗೆ ಹೆಚ್ಚು ಮಾತನಾಡದೆ ಗುಟ್ಟಾಗಿಡುವುದು.
6. ನಕಾರಾತ್ಮಕತೆಗಳನ್ನು ಗೆಲ್ಲಲು ದೇಹ, ಮನಸ್ಸು ಮತ್ತು ಬುದ್ಧಿಗಳನ್ನು ಸಿದ್ಧಗೊಳಿಸುವುದು.
7. ನಮಗೆ ಬೇಕಾದ ಲೌಕಿಕ ಅಗತ್ಯಗಳ ಬಗ್ಗೆ ನಾವೇ ನಮ್ಮ ತೃಪ್ತಿಯ ರೇಖೆಗಳನ್ನು ಹಾಕಿಕೊಂಡು, ಆಧ್ಯಾತ್ಮಿಕ ಸಾಧನೆಯ ಬಗ್ಗೆ ಗಮನಕೊಡುವುದು.

# ಗುರೂಜಿಯವರ ನುಡಿಗಳು

### ಗುರೂಜಿಯವರ ಭಾಷಣಗಳಿಂದ ಆಯ್ದ ಭಾಗಗಳು

ಸಂ: ಶೋಭಾ ಕೆ. ರಾವ್; ಅನು: ಸುಜಾತ ವಿ

ಜೂನ್ 2006 (ಮುಂದುವರೆದದ್ದು)

ಕಳೆದ ಬಾರಿ ಈ ವಿಷಯವನ್ನು ಎತ್ತಲಾಗಿತ್ತು – ಅತಿ ಅವಿವೇಕದ ಮತ್ತು ದುರಹಂಕಾರದ ವ್ಯಕ್ತಿಯೊಬ್ಬರ ಜೊತೆ ಹೇಗೆ ವ್ಯವಹಾರ ಮಾಡಬೇಕು? ಅಂತಹ ಜನರು ಎದುರಾಗುತ್ತಾರೆ, ಅವರ ಜೊತೆ ನಾವು ಹೇಗೆ ವ್ಯವಹರಿಸಬೇಕು? ನೀವು ಧ್ಯಾನಿಯೆಂದು ನೆನಪಿರಲಿ. ಯಾವಾಗಲೂ ನಿಮ್ಮಲ್ಲಿ ಬೆಳಕು ಇರಲಿ. ನಿಮ್ಮಲ್ಲಿ ಬೆಳಕಿದೆ ಎಂಬ ಅರಿವಿದ್ದರೆ, ನೀವು ಶಕ್ತಿವಂತರೆಂಬ ಅನುಭವವಾಗುತ್ತದೆ. ಬಹುಶ: ನೀವು ಮೌನವಾಗಿರುತ್ತೀರಿ, ನೀವು ಏನೂ ಮಾತನಾಡುವುದಿಲ್ಲ. ಯಾವುದೇ ಮಾತುಗಳ ಮೂಲಕ ಪ್ರತೀಕಾರ ಮಾಡುವುದಿಲ್ಲ, ಆದರೆ ನಿಮ್ಮಲ್ಲಿರುವ ಶಕ್ತಿಯು ಕಂಪಿಸುತ್ತದೆ. ಅದು ವ್ಯತ್ಯಾಸವನ್ನುಂಟುಮಾಡುತ್ತದೆ. ನೀವು ಈ ರೀತಿಯ ಪ್ರಯೋಗವನ್ನು ಮಾಡಬಹುದು. ನೆನಪಿರಲಿ, ನೀವು ಸರಿಯಾಗಿದ್ದಾಗ ಮಾತ್ರ ಬಲವಾಗಿರುತ್ತೀರ. ನೀವು ಸರಿಯಾಗಿದ್ದಾಗ, ನಿಮ್ಮ ಮೌನವೇ ಕೆಲಸ ಮಾಡುತ್ತದೆ. ನೀವು ಸರಿಯಾಗಿದ್ದಾಗ, ನಿಮಗೆ ಎಲ್ಲ ಸಹಾಯ, ರಕ್ಷಣೆ ಮತ್ತು ಬೆಂಬಲ ದೇವರಿಂದ ಹಾಗೂ ಋಷಿಗಳಿಂದ ಸಿಗುತ್ತದೆ. ಆದುದರಿಂದ ಈ ಸರಳವಾದ ತಂತ್ರ ಬಹಳ ಮಹತ್ವವಾದದ್ದು – ಈ ಬೆಳಕಿನ ಅರಿವಿರಲಿ. ನಿಮಗೆ ಬೆಳಕಿನ ಅರಿವು ಹೆಚ್ಚು ಆದಂತೆ, ಬೆಳಕು ನಿಮ್ಮ ಜೊತೆಗಾರ ಆಗುತ್ತದೆ. ನೀವು ಇದನ್ನು ಅಭ್ಯಾಸ ಮಾಡಬೇಕು ಮತ್ತು ಅನುಭವಿಸಬೇಕು. ಪರಿಸ್ಥಿತಿಗೆ ತಕ್ಕಂತೆ ನಿಮ್ಮ ನಡವಳಿಕೆ ಹೇಗಿರಬೇಕು, ನೀವು ಹೇಗೆ ವರ್ತಿಸಬೇಕು, ಮಾತನಾಡಬೇಕು ಮತ್ತು ವ್ಯವಹರಿಸಬೇಕು ಎಂದು ಈ ಸಂಗಾತಿ, ಈ ದಿವ್ಯ ಮಾರ್ಗದರ್ಶಿ ನಿಮಗೆ ಸ್ಪಷ್ಟವಾಗಿ ಹೇಳುತ್ತದೆ. ಇದನ್ನು ಪ್ರಯತ್ನಿಸಿ, ನೀವು ಯಾವಾಗಲೂ ಸೋಲುವುದಿಲ್ಲ. ನಾನು ಇದನ್ನು ಪ್ರಯತ್ನಿಸಿದ್ದೇನೆ ಮತ್ತು ನಾನು ಯಾವತ್ತೂ ವಿಫಲನಾಗಿಲ್ಲ. ಕಿರಿಕಿರಿ ಜನರನ್ನು ಮತ್ತು ಕಠಿಣ ಪರಿಸ್ಥಿತಿಯನ್ನು ಎದುರಿಸುವಾಗ, ಆಕ್ಷೇಪಿಸುವುದು ಮತ್ತು ಗೊಣಗುವುದು ನನಗೆ ಸುಲಭವಾಗಿತ್ತು. ನಾನು ಸರಿಯಾಗಿದ್ದೆ, ಅವರದೇ ತಪ್ಪಾಗಿತ್ತು, ಆದರೂ ನಾನು ಸುಮ್ಮನೆ ಮೌನವಾಗಿದ್ದೆ. ನಂತರ, ವರ್ಷಗಳಾದ ಮೇಲೆ ಜನರು ಹೇಳುತ್ತಿದ್ದರು, 'ಇವರು ಬಲಶಾಲಿಯಾಗಿದ್ದರು, ಆದರೆ ಯಾವತ್ತೂ ಗೊಣಗಲಿಲ್ಲ'. ಇದಕ್ಕೆ ಬಹಳ ತಾಳ್ಮೆ ಬೇಕಾಗುತ್ತದೆ. ಯಾವುದು ನನ್ನನ್ನು ಇಷ್ಟೊಂದು ಬಲಶಾಲಿಯನ್ನಾಗಿ ಮಾಡಿತು? ನನಗೆ ಈ ತಂತ್ರದ ಬಗ್ಗೆ ಗೊತ್ತಿರಲಿಲ್ಲ, ಆದರೆ ನನ್ನ ಗುರು ನನ್ನ ಜೊತೆ ಇದ್ದರೆಂದು ಹೇಗೊ ನನಗೆ ಅನಿಸುತ್ತಿತ್ತು. ನನ್ನ ಗುರು ನನ್ನ ಜೊತೆ ಇದ್ದರು ಮತ್ತು ಈಗಲೂ ನನ್ನ ಜೊತೆ ಇದ್ದಾರೆ.

ಡಿಕ್ಷನರಿ ಅಥವಾ ಯಾವುದೇ ಪೂರ್ವಸಿದ್ಧ ಮಾಹಿತಿ ಇರುವುದು ಸಾಧ್ಯವಿಲ್ಲ. ಪ್ರತಿಯೊಂದು ಪರಿಸ್ಥಿತಿಯೂ ಬೇರೆಯಾಗಿರುತ್ತದೆ. ಜೀವನವು ಜಟಿಲವಾಗಿರುತ್ತದೆ, ಮತ್ತು ಜನರು ಜಟಿಲರಾಗಿರುತ್ತಾರೆ. ಬಹುಶಃ ಅದೇ ಮನುಷ್ಯ ಅದೇ ದಿನ ಹತ್ತು ಬೇರೆ ಬೇರೆ ರೀತಿಯಲ್ಲಿ ವರ್ತಿಸುತ್ತಾನೆ! ನೀವು ಸರಿಯಾಗಿದ್ದರೆ, ನೀವು ಬಲವಾಗಿದ್ದರೆ, ನಿಮಗೆ ಹೇಗೆ ವ್ಯವಹರಿಸಬೇಕೆಂದು ತಿಳಿಯುತ್ತದೆ. ನೀವು ಬೆಳಕಿನ ಜೊತೆ ಸಂಪರ್ಕದಲ್ಲಿದ್ದರೆ, ನೀವು ಯಾರೊಂದಿಗಾದರೂ ಯಾವುದೇ ಪರಿಸ್ಥಿತಿಯಲ್ಲೂ ವ್ಯವಹರಿಸಬಹುದು. ಅದಕ್ಕಾಗಿಯೇ ನಾನು 1000 ಬಾರಿ ಪುನರಾವರ್ತಿಸುತ್ತೇನೆ, ಮತ್ತೆ ಮತ್ತೆ ಪುನರಾವರ್ತಿಸಿ ಹೇಳುವುದಕ್ಕೆ ನನಗೇನೂ ಅನಿಸುವುದಿಲ್ಲ, 'ಬೆಳಕನ್ನು ನಿಮ್ಮ ಸಂಗಾತಿಯನ್ನಾಗಿ ಮಾಡಿಕೊಳ್ಳಿ'. ಏನನ್ನು ಹೇಳಬೇಕು, ಏನನ್ನು ಹೇಳಬಾರದು, ಏನನ್ನು ಒಪ್ಪಿಕೊಳ್ಳಬೇಕು, ಏನನ್ನು ಒಪ್ಪಿಕೊಳ್ಳಬಾರದೆಂದು ನಿಮಗೆ ಗೊತ್ತಾಗುತ್ತದೆ ಮತ್ತು ನೀವು ಯಾವಾಗಲು ಶಾಂತರಾಗಿರುತ್ತೀರಿ ಮತ್ತು ಸಮತೋಲನದಿಂದ ಇರುತ್ತೀರಿ. ಇದನ್ನು ಪ್ರಯತ್ನಿಸಿ.

ಗುರಿಗಳನ್ನು ಇಟ್ಟುಕೊಳ್ಳುವ ಬಗ್ಗೆ ನಾನು ಬಹಳ ಸಲ ಮಾತನಾಡಿದ್ದೇನೆ. ಆಧ್ಯಾತ್ಮಿಕ ಅನ್ವೇಷಣೆಗಳಲ್ಲೂ ಕೂಡ ನಾವು ಗುರಿಗಳನ್ನು ಇಟ್ಟುಕೊಳ್ಳಬೇಕು. ನಾವು ಒಂದು ಗುರಿಯಿಂದ ಆರಂಭಿಸುತ್ತೇವೆ, ಆ ಗುರಿ ವಿಸ್ತರಿಸಬಹುದು, ಮತ್ತು ಆ ಗುರಿ ವಿಸ್ತರಿಸಬೇಕು. ನನ್ನ ಸಮಸ್ಯೆಗಳನ್ನು ಜಯಿಸಲು ನಾನು ಧ್ಯಾನಕ್ಕೆ ಸೇರಿದೆ ಮತ್ತು ನನ್ನ ಸಮಸ್ಯೆಗಳು ಮಾಯವಾದವು ಮತ್ತು ನಾನು ಈಗಲೂ ಇಲ್ಲೇ ಇದ್ದೇನೆ. ನಾನು ಸಂತೋಷವಾಗಿದ್ದೇನೆ. ನನ್ನ ಗುರಿಗಳು ವಿಸ್ತಾರವಾದವು. ನಾವು ಒಂದು ಗುರಿಯೊಂದಿಗೆ ಆರಂಭಿಸಬೇಕು, ನಾವು ಗುರಿಯೊಂದನ್ನು ಇಟ್ಟುಕೊಳ್ಳಲೇಬೇಕು ಮತ್ತು ನಮ್ಮ ಪಾತ್ರವನ್ನು ಅರ್ಥ ಮಾಡಿಕೊಳ್ಳಬೇಕು – ಅದು ಬಹಳ ಮುಖ್ಯ. ಕುಟುಂಬದಲ್ಲಿ, ಕೆಲಸ ಮಾಡುವ ಜಾಗದಲ್ಲಿ, ಸಮಾಜದಲ್ಲಿ, ಇಲ್ಲಿಯ ಸಾಧಕರಾಗಿ, ಧ್ಯಾನಿಗಳಾಗಿ, ಸ್ವಯಂಸೇವಕರಾಗಿ ನಮ್ಮ ಪಾತ್ರವೇನು? ನಮಗೆ ಗೊತ್ತಿರಬೇಕು. ನಮ್ಮ ಪಾತ್ರವನ್ನು ನಾವು ಅರ್ಥ ಮಾಡಿಕೊಂಡರೆ, ನಮ್ಮ ಜವಾಬ್ದಾರಿಗಳಿಂದ ಯಾವತ್ತೂ ಜಾರಿಕೊಳ್ಳುವುದಿಲ್ಲ. ಈ ವಿಷಯದ ಬಗ್ಗೆ ಆಲೋಚಿಸಲು ನಿಮಗೆ ಅವಕಾಶಮಾಡಿಕೊಡುತ್ತೇನೆ. ಈ ಪಾತ್ರದ ಇನ್ನೂ ಎರಡು ಮುಖ್ಯ ಅಂಶಗಳನ್ನು ಹೇಳುತ್ತೇನೆ. ನಮಗೆ ನಮ್ಮ ಪಾತ್ರದ ಅರಿವಾದರೆ, ನಾವು ಏನು ಮಾಡಬೇಕೆಂದು ನಮಗೆ ತಿಳಿಯುತ್ತದೆ. ನಮ್ಮ ತಂದೆತಾಯಿಯವರ ಕಡೆಗೆ, ನಾವು ಕೆಲಸ ಮಾಡುವ ನಮ್ಮ ಸಂಸ್ಥೆಯ ಕಡೆಗೆ, ಋಷಿಗಳ ಕಡೆಗೆ, ನಮ್ಮ ಸ್ವಂತ ಸಾಧನೆಯ ಕಡೆಗೆ ನಮ್ಮ ಕರ್ತವ್ಯ ಮತ್ತು ಜವಾಬ್ದಾರಿಗಳು ನಮಗೆ ಗೊತ್ತಿರುತ್ತವೆ. ನಾವು ಏನನ್ನು ಮಾಡಬಾರದು ಎನ್ನುವುದು ಎರಡನೆಯ ಮುಖ್ಯ ಅಂಶ. ಉತ್ಸಾಹವು ಕೆಲವೊಮ್ಮೆ ನಮ್ಮಲ್ಲಿ ತೀರಾ ಅಸೂಯೆಯನ್ನು ಉಂಟುಮಾಡುತ್ತದೆ. ನಾವು ಮಾಡಬೇಕಾಗಿಲ್ಲದಿರುವ ಕೆಲಸಗಳನ್ನು ಮಾಡಲು ಪ್ರಯತ್ನಿಸಬಹುದು. ಪರಿಪೂರ್ಣತೆಯೆಂದರೆ ಹೆಚ್ಚೂ ಮಾಡಬಾರದು ಅಥವಾ ಕಡಿಮೆಯೂ ಮಾಡಬಾರದು. ಆದುದರಿಂದ ನಮ್ಮ ಪಾತ್ರವನ್ನು ಅರ್ಥ ಮಾಡಿಕೊಳ್ಳುವುದು ಬಹಳ ಮುಖ್ಯ, ವಿಶೇಷವಾಗಿ ಸಾಧನೆ ಮಾಡುವಾಗ. ನಾನು ಗುರುವೆಂದು ನನಗೆ ತಿಳಿದಾಗ, ನನ್ನ ಜವಾಬ್ದಾರಿಗಳು ಕೂಡ ನನಗೆ ತಿಳಿದಿರುತ್ತವೆ. ನನಗೆ ಗೊತ್ತಿದೆ, ಇಲ್ಲಿ ಜವಾಬ್ದಾರಿಗಳಿಗೆ ಯಾವುದೇ ಇತಿಮಿತಿ ಇಲ್ಲ. ನನ್ನ ಹೃದಯದ ಬಾಗಿಲನ್ನು ಯಾವಾಗಲೂ ಎಲ್ಲರಿಗೂ ತೆರೆದಿಟ್ಟಿರಬೇಕು ಮತ್ತು ನಾನು ನನ್ನ ಗುರುವನ್ನು ಅರ್ಥ ಮಾಡಿಕೊಳ್ಳಬೇಕು. "ನಾನು ನಿಮಗೆ ಪಾಠವನ್ನು ಕಲಿಸಿದ್ದೇನೆ, ನಿಮ್ಮ ಪ್ರಶ್ನೆಗಳಿಗೆಲ್ಲಾ ಉತ್ತರಿಸಿದ್ದೇನೆ, ನನ್ನ ಕೆಲಸ ಮುಗಿಯಿತು," ಎಂದು ನಾನು ಹೇಳಲಾಗುವುದಿಲ್ಲ. ಜನರು, ತಮ್ಮ ಮೂಲವಾದ ದೇವರ ಬಳಿಗೆ ಹಿಂದಿರುಗುವವರೆಗೂ ನನ್ನ ಕೆಲಸ ಮುಗಿಯುವುದಿಲ್ಲ. ಅದು ಗುರುವಿನ ಪಾತ್ರ – ನಾನು ಅದನ್ನು ಅರಿತುಕೊಳ್ಳಬೇಕು. ಒಬ್ಬ ವಿದ್ಯಾರ್ಥಿ, ತಾನು ವಿದ್ಯಾರ್ಥಿ, ಇನ್ನೂ ಗುರುವಾಗಿಲ್ಲ ಎಂದು ಅರಿಯುತ್ತಾನೆ. ಆದ್ದರಿಂದ ಅವನು ಕಲಿಯುತ್ತಾನೆ. ಅವನು ಕೊನೆಯ ಪಕ್ಷ ಗುರುವಿಗೆ ತಿಳಿ ಹೇಳಲು ಪ್ರಯತ್ನಿಸುವುದಿಲ್ಲ! ಕುಟುಂಬದಲ್ಲಿ ನನ್ನ ಪಾತ್ರವನ್ನು ಅರಿತುಕೊಂಡಾಗ, ನಾನು ನನ್ನ ಕುಟುಂಬವನ್ನು ಯಾವಾಗಲೂ ನಿರ್ಲಕ್ಷಿಸುವುದಿಲ್ಲ. ಈ ವ್ಯಕ್ತಿಯು ಸಂನ್ಯಾಸಿಯಾಗುತ್ತಾನೆಂದು ಕುಟುಂಬದ ಸದಸ್ಯರು ಯಾವತ್ತೂ ದೂರುವುದಿಲ್ಲ, ಯಾವತ್ತೂ ಭಯ ಪಡುವುದಿಲ್ಲ! ಆದುದರಿಂದ ಒಂದು ಗುರಿಯನ್ನು ಇಟ್ಟುಕೊಳ್ಳಿ ಮತ್ತು ನಿಮ್ಮ ಪಾತ್ರವನ್ನು ತಿಳಿದಿರಿ.

ಇಲ್ಲಿ ಒಂದು ಸೂಕ್ಷ್ಮವಾದ ವಿಷಯ ಕೂಡ ಇದೆ. ದೇವರ ಜೊತೆ ಸಂಪರ್ಕದಲ್ಲಿರುವಂತಹ ಈ ಆಧ್ಯಾತ್ಮಿಕ ರೀತಿಗಳನ್ನು ಬಳಸಿಕೊಂಡಾಗ ಬಹುತೇಕ ಬಾರಿ ಎಲ್ಲವೂ ನಮಗೆ ಅನುಕೂಲಕರ ರೀತಿಯಲ್ಲಿ ನಡೆಯುತ್ತವೆ. ಆದರೆ ಕೆಲವೊಮ್ಮೆ ನಾವು ಅಂದುಕೊಂಡಂತೆ ಅದು ಆಗುವುದಿಲ್ಲ. ನಿರ್ದಿಷ್ಟವಾದ ಫಲಿತಾಂಶ ನಮಗೆ ಬೇಕಾಗಿರುವ ರೀತಿಯಲ್ಲಿ ಸಿಗದಿರುವ ಕಾರಣಕ್ಕೆ ನಾವು ವಿಫಲರಾಗಿದ್ದೇವೆಂದು ಭಾವಿಸುತ್ತೇವೆ. ಅಲ್ಲಿಯೇ ನಾವು ಬೆಳಕಿನ ಜೊತೆ ಹೆಚ್ಚು ಸಮಾಲೋಚಿಸಬೇಕಾಗಿರುವುದು, ಅಲ್ಲಿಯೇ ಬೆಳಕನ್ನು ಹೆಚ್ಚು ಆಲಿಸಬೇಕಾಗಿರುವುದು. ಈ ಸಮಯದಲ್ಲಿ ವಿಫಲತೆಯೇ ಸರಿಯಾದುದು ಎಂದು ಬೆಳಕು ನಮಗೆ ಹೇಳುತ್ತದೆ. ನನ್ನ ಗುರುವಿನ ಬಳಿ ನಾನು ಸೇರಿದಾಗ ಮತ್ತು ಮನೋವತಿಯಲ್ಲಿಯೇ ವಾಸವಾಡಲಾರಂಭಿಸಿದಾಗ, ನಾನು ಬಹಳ ಸಂತೋಷದಿಂದಿದ್ದೆ. ಬೇರೆಲ್ಲರೂ ನನ್ನ ಗುರುವನ್ನು ಬಿಟ್ಟಾಗ, ನಾನು ಅವರಿಗೆ ಅಂಟಿಕೊಂಡಿದ್ದೆ. ನನ್ನ ಗುರು, ಬಹುಶಃ ನನ್ನನ್ನು ಆಚೆ ತಂದು, ಬಹಳ ಪರೀಕ್ಷೆಗಳನ್ನು ಅನುಭವಿಸುವಂತೆ ಮಾಡಿದರು. ಬಹುಶಃ ಆ ಸಮಯದಲ್ಲಿ ಅದು ಅಗತ್ಯವಾಗಿತ್ತೇನೋ. ಅದು ವೈಫಲ್ಯವಲ್ಲ, ಅದು ಹಾಗೆಯೇ ಆಗಬೇಕಾಗಿತ್ತು.

# ಶ್ರೀ ಜಯಂತ್ ದೇಶ್‌ಪಾಂಡೆಯವರ ಭಾಷಣದ ಆಯ್ದ ಭಾಗಗಳು

ಸಂ: ಶೋಭಾ ಕೆ. ರಾವ್; ಅನು: ಕಾಂಚನಲತಾ

13 ಡಿಸೆಂಬರ್ 2020

2020ನೇ ಇಸವಿಯು ಆಗಲೇ ಕೊನೆಯಾಗುತ್ತಿದೆ. ಪಿಡುಗಿನ ಈ ವರ್ಷ ಕೂಡ ಬಹಳ ಬೇಗನೇ ಸರಿದು ಹೋಗಿದೆ. ಇದೊಂದು ಕಷ್ಟದ ವರ್ಷವೇ ಆಗಿದ್ದರೂ ಸಹ, ಒಂದು ರೀತಿಯಲ್ಲಿ, ಇದು ಅವಕಾಶಗಳ ವರ್ಷವೂ ಆಗಿತ್ತು. ಕಷ್ಟಗಳೂ ಸಹ ಒಂದು ಬಗೆಯ ಅವಕಾಶವೇ ಎಂದು ಇಲ್ಲಿ ನಾವು ಅರ್ಥ ಮಾಡಿಕೊಂಡಿದ್ದೇವೆ. ಮಾಸ್ಟರ್ ಎಖಾರ್ಟ್ ಟೋಲ್ (Eckhart Tolle) ಅವರ ಒಂದು ವಿಡಿಯೋವನ್ನು ನಾನು ನೋಡಿದೆ. ಎಲ್ಲ ಪ್ರತಿಕೂಲತೆಯೂ ಒಂದು ಅವಕಾಶವೇ ಎಂದು ಅವರು ಹೇಳುತ್ತಾರೆ. ಪ್ರತಿ ಬಾರಿಯೂ ಅಲ್ಲದಿದ್ದರೂ, ಸಾಮಾನ್ಯವಾಗಿ, ಜಾಗತಿಕ ಅಥವಾ ವೈಯಕ್ತಿಕ ಜಾಗೃತಿಯು ಒಂದು ಪ್ರತಿಕೂಲತೆಯ ನಂತರವಷ್ಟೇ ನಡೆಯುತ್ತದೆ ಎಂದು ಅವರು ಹೇಳಿದ್ದಾರೆ. ಹಾಗಾಗಿ, ನಾವು ಪ್ರತಿಯೊಂದು ಕಷ್ಟವನ್ನೂ, ಎಲ್ಲಾ ಪ್ರತಿಕೂಲತೆಗಳನ್ನೂ ಒಂದು ರೀತಿಯ ಆಧ್ಯಾತ್ಮಿಕ ಕೊಡುಗೆ ಎಂದು ಪರಿಗಣಿಸಬೇಕು. ನಾವು ಒಂದು ಕಷ್ಟದ ಪರಿಸ್ಥಿತಿಯನ್ನು ಅನುಭವಿಸುತ್ತಿರುವಾಗ, ನಮ್ಮ ಸಂಪೂರ್ಣ ಗಮನ ಆ ತೊಂದರೆಯ ಮೇಲೆಯೇ ಕೇಂದ್ರೀಕೃತವಾಗಿರುತ್ತದೆ. ನಮ್ಮ ಸಂಪೂರ್ಣ ವ್ಯಕ್ತಿತ್ವವನ್ನು, ನಮ್ಮ ಪ್ರಜ್ಞೆಯನ್ನು ಆ ತೊಂದರೆಯೇ ಆಕ್ರಮಿಸಿಕೊಂಡುಬಿಟ್ಟಿರುತ್ತದೆ ಮತ್ತು ಆ ಸಮಯದಲ್ಲಿ ಅದನ್ನು ಒಂದು ಅವಕಾಶವೆಂದು ಯೋಚಿಸುವುದು ಕಷ್ಟವಾಗುತ್ತದೆ. ಆದರೆ, ಪ್ರತಿಯೊಂದು ಕಷ್ಟದ ನಂತರ, ನಾವು ಒಂದು ಹಂತಕ್ಕೆ ಪ್ರಬುದ್ಧರಾಗಿ ಬೆಳೆಯುವುದಂತೂ ಸತ್ಯ. ಆ ಬೆಳವಣಿಗೆಯ ಹಂತ ವ್ಯಕ್ತಿಯಿಂದ ವ್ಯಕ್ತಿಗೆ ಬೇರೆ ಬೇರೆ ಇದ್ದರೂ, ನಾವು ಬೆಳೆದಿರುವುದಂತೂ ಖಚಿತ.

ಈ ಭೂಮಿಯ ಮೇಲಿರುವ ಪ್ರತಿಯೊಬ್ಬರಿಗೂ ಒಂದಲ್ಲ ಒಂದು ರೀತಿಯಲ್ಲಿ ಈ ಪಿಡುಗು ಬಾಧಿಸಿದೆ. ಇದು ಒಂದು ಜಾಗತಿಕ ಸಮಸ್ಯೆ ಮತ್ತು ಬಹುತೇಕ ಪ್ರತಿಯೊಬ್ಬ ವ್ಯಕ್ತಿಗೂ ಇದು ಒಂದು ರೀತಿಯಲ್ಲಿ ವೈಯಕ್ತಿಕ ಸಮಸ್ಯೆಯಾಗಿತ್ತೆಂದು ಹೇಳಬಹುದು. ಕೆಲವರಿಗೆ ಈ ಸಮಸ್ಯೆಯ ತೀವ್ರತೆ ಅಗಾಧವಾಗಿ ಆಗಿದ್ದರೆ ಮತ್ತೆ ಕೆಲವರಿಗೆ ಅಷ್ಟೊಂದು ಅಗಾಧತೆ ಇರಲಿಲ್ಲ. ಜಾಗತಿಕ ಸಮಸ್ಯೆಗಳು ಒಂದು ರೀತಿಯ ಸಾಮೂಹಿಕ ಅವಕಾಶಗಳನ್ನು ಸೃಷ್ಟಿಸಬಹುದು. ಜನರು ಸಾಮೂಹಿಕವಾಗಿ ಬೆಳೆಯಲು ಇದೊಂದು ಅವಕಾಶವಾಗಿತ್ತು. ಇದು ಜಾಗತಿಕ ಜಾಗೃತಿಯಲ್ಲಿ, ಸಾಮೂಹಿಕ ಜಾಗೃತಿಯಲ್ಲಿ ಬದಲಾವಣೆಯಾಗಲು ಒಂದು ಅವಕಾಶವಾಗಿತ್ತು. ಜನರು, ಅನೇಕ ಪ್ರಶ್ನೆಗಳಿಗೆ ಉತ್ತರ ಹುಡುಕಲು ಅಂತರಂಗದತ್ತ ತಿರುಗಬೇಕಾಯಿತು. ಬಹುಶಃ ಪ್ರತಿಯೊಬ್ಬರೂ ಈ ಪ್ರಶ್ನೆಯನ್ನು ಕೇಳಿಕೊಂಡಿರುತ್ತಾರೆ – ಇದು ಏಕೆ ಜರುಗುತ್ತಿದೆ? ಬಹುಪಾಲು ಜನರು ಅಂತರ್ಮುಖಿಗಳಾದಾಗ, ಅಲ್ಲೊಂದು ಆಧ್ಯಾತ್ಮಿಕ ಪರಿಣಾಮ ಉಂಟಾಗಿ, ಸಾಮೂಹಿಕ ಜಾಗೃತಿಯಾಗಿ ಪರಿಣಮಿಸಿರುತ್ತದೆ. ಈ ಜಾಗತಿಕ ಜಾಗೃತಿಯ, ಸಾಮೂಹಿಕ ಜಾಗೃತಿಯ ಪ್ರಕ್ರಿಯೆಗೆ ಶಕ್ತಿ ಸಂಗ್ರಹವಾಗುತ್ತಿದೆ. ಹೊಸ ಯುಗದೆಡೆಗಿನ ನಮ್ಮ ನಡಿಗೆ ವೇಗ ಪಡೆಯುತ್ತಿದೆ. ಖಂಡಿತವಾಗಿ ಅನೇಕರು ಬಳಲಿದ್ದಾರೆ ಮತ್ತು ಇನ್ನೂ ಕೆಲವರು ಬಳಲುವುದು ಇನ್ನೂ ಮುಂದುವರೆದಿದೆ ಹಾಗೂ ಇವುಗಳನ್ನೆಲ್ಲಾ ನೋಡುವುದು ಬಹಳ ನೋವಿನ ಸಂಗತಿ. ಆದರೆ, ಪರಿಸ್ಥಿತಿ ಸುಧಾರಿಸುವುದರ ಬಗ್ಗೆ ಸದಾ ಭರವಸೆ ಇದೆ.

ನಮ್ಮ ಸಂಸ್ಥೆಯ ಕುರಿತು ಹೇಳುವುದಾದರೆ, ಬೆಂಗಳೂರಿನಲ್ಲಿರುವ ನಮ್ಮ ಎಲ್ಲಾ ಧ್ಯಾನ ಕೇಂದ್ರಗಳಲ್ಲೂ ತರಗತಿಗಳನ್ನು ನಿಲ್ಲಿಸಬೇಕಾಯಿತು. ಇಂಟರ್ನೆಟ್‌ಗೆ ಧನ್ಯವಾದಗಳು. ವೆಬ್‌ಕಾಸ್ಟ್ ಮೂಲಕ, ಇಂಟರ್ನೆಟ್ ಮೂಲಕ ನಮ್ಮ ತರಗತಿಗಳನ್ನು ಮುಂದುವರೆಸಲು ಸಾಧ್ಯವಾಯಿತು. ಅದು ಹೇಗೋ ಪ್ರಾಥಮಿಕ ತರಗತಿಗಳನ್ನು ಲೈವ್ ಆಗಿ ಇಂಟರ್ನೆಟ್ ಮೂಲಕ ನಡೆಸಲು ಸಾಧ್ಯವಾಯಿತು. ಗುರೂಜಿಯವರ ಸಮಾಧಿಯ ನವೀಕರಣ ಕಾರ್ಯವನ್ನು ಪೂರ್ಣಗೊಳಿಸಲು ನಮಗೆ ಸಾಧ್ಯವಾಯಿತು. ಅನೇಕ ಸವಾಲುಗಳ ನಡುವೆಯೂ ನಮ್ಮ ಎಲ್ಲಾ ಕೆಲಸಗಳನ್ನು ಮುಂದುವರೆಸಲು ಸಾಧ್ಯವಾಯಿತು. ನಮ್ಮ ಕೆಲಸಗಳನ್ನು ಮುಂದುವರೆಸಲು ಸಹಾಯ ಮಾಡಿದ ಋಷಿಗಳಿಗೆ ನಾವು ಧನ್ಯವಾದಗಳನ್ನು ಅರ್ಪಿಸುತ್ತೇವೆ.

ಪ್ರತಿ ಹೊಸ ವರ್ಷವು ಹೊಸ ಶಕ್ತಿಗಳನ್ನು ಮತ್ತು ಹೊಸ ಅವಕಾಶಗಳನ್ನು ಮತ್ತು ಹೊಸ ಭರವಸೆಗಳನ್ನು ತರುತ್ತದೆ. 2021ನೇ ವರ್ಷವು, ನಮ್ಮನ್ನು ಹೊಸ ಯುಗದತ್ತ ಮತ್ತೊಂದು ಹೆಜ್ಜೆ ಹತ್ತಿರ ಕೊಂಡೊಯ್ಯುವ ಅದ್ಭುತವಾದ ವರ್ಷವಾಗಿರುತ್ತದೆಂದು ಆಶಿಸಿದ್ದೇವೆ.

ನನ್ನ ಗಮನಕ್ಕೆ ಬಂದ ಒಂದು ಸ್ವಾರಸ್ಯಕರವಾದ ವಿಷಯವನ್ನು ನಿಮ್ಮೊಂದಿಗೆ ಹಂಚಿಕೊಳ್ಳಲು ಇಚ್ಛಿಸುತ್ತೇನೆ. ನಮ್ಮ ವಿದ್ಯಾರ್ಥಿಗಳಲ್ಲಿ ಒಬ್ಬರು ನಮ್ಮ ಸ್ವಯಂ ಸೇವಕರೊಬ್ಬರ ಮೂಲಕ, 1997ರಲ್ಲಿ ಜರ್ಮನಿ ವಿಶ್ವ ವಿದ್ಯಾಲಯದಲ್ಲಿ ನಡೆಸಿದ ಒಂದು ಪ್ರಯೋಗದ ಕುರಿತಾದ ಒಂದು ಲಿಂಕ್ ಕಳಿಸಿದ್ದರು. ಒಬ್ಬ ಸಾಧಕನನ್ನು, ಸಂಪೂರ್ಣವಾಗಿ ಮುಚ್ಚಿದ್ದ, ಬೆಳಕು ಒಳಗೆ ಬರಲಾಗದಂತಹ ಕತ್ತಲ ಕೋಣೆಯೊಂದರಲ್ಲಿ ಧ್ಯಾನ ಮಾಡಲು ಹೇಳಿದರು. ಹೀಲಿಂಗ್ ಅಗತ್ಯವಿದ್ದ ವ್ಯಕ್ತಿಯೊಬ್ಬರಿಗೆ ಬೆಳಕನ್ನು ಕಳಿಸುವ ತಂತ್ರವನ್ನು ಉಪಯೋಗಿಸಬೇಕಿತ್ತು. ಆ ಸಾಧಕರು ಬೆಳಕನ್ನು ಒಂದೇ ಸಮನೆ ಕಳಿಸತೊಡಗಿದರು. ಆ ಸಾಧಕನ ಮುಂದೆ, ಬೆಳಕಿನ ಫೋಟಾನ್‌ಗಳನ್ನು ಅಥವಾ ಬೆಳಕಿನ ಕಣಗಳನ್ನು ಗ್ರಹಿಸಬಹುದಾದ ಒಂದು ಅತಿ ಸೂಕ್ಷ್ಮವಾದ ಉಪಕರಣವೊಂದನ್ನು ಇಡಲಾಗಿತ್ತು. ಆ ಸಾಧಕನ ಎದೆಯ ಮಧ್ಯ ಭಾಗದಿಂದ ಪ್ರತಿ ಸೆಕೆಂಡಿಗೆ 100,000 ಫೋಟಾನ್‌ಗಳು ಹರಿದು ಬರುತ್ತಿದ್ದುದನ್ನು ಆ ಉಪಕರಣವು ತೋರಿಸುತ್ತಿದ್ದುದನ್ನು ಗಮನಿಸಿದರು. ಈ ಹರಿವನ್ನು ಆ ಸಾಧಕ ಧ್ಯಾನ ಮಾಡದೆ ಇರುವಾಗ, ಬೆಳಕನ್ನು ಕಳಿಸದೇ ಇರುವಾಗ ಪರಿಶೀಲಿಸಿದಾಗ, ಹರಿದು ಬಂದ ಬೆಳಕಿನ ಪ್ರಮಾಣ ಗಣನೆಗೆ ಬಾರದಷ್ಟು ಕಡಿಮೆ ಇದ್ದುದನ್ನು ಗಮನಿಸಿದರು. ಅದು ಪ್ರತಿ ಸೆಕೆಂಡಿಗೆ ಕೇವಲ 20 ಫೋಟಾನ್ ಆಗಿತ್ತು. ಹಾಗಾಗಿ, ಆ ವ್ಯಕ್ತಿಯು ಧ್ಯಾನ ಮಾಡುವಾಗ ಅಥವಾ ಬೆಳಕನ್ನು ಕಳಿಸುವ ಸಮಯದಲ್ಲಿ ಆ ಉಪಕರಣವು ಪ್ರತಿ ಸೆಕೆಂಡಿಗೆ 100,000 ಫೋಟಾನ್‌ಗಳು ಮತ್ತು ಆ ವ್ಯಕ್ತಿ ಧ್ಯಾನ ಮಾಡದೆ ಇದ್ದಾಗ ಗಣನೆಗೆ ಬಾರದಷ್ಟು ಫೋಟಾನ್‌ಗಳು ಹರಿದು ಬರುವುದನ್ನು ಗ್ರಹಿಸಿತ್ತು. ಇದು ನಿಜವಾಗಿಯೂ ಅದ್ಭುತವಾದ ಅನ್ವೇಷಣೆಯಾಗಿದೆ!

ಒಂದು ವ್ಯಕ್ತಿಗೆ ಬೆಳಕನ್ನು ಕಳುಹಿಸುವಾಗ, ನಾವು ಬಹಳ ಸೂಕ್ಷ್ಮವಾದ ತರಂಗಗಳನ್ನು ಕಳುಹಿಸುತ್ತಿರುತ್ತೇವೆ ಹಾಗೂ ಅದು ಭೌತಿಕ ತರಂಗಗಳು ಅಲ್ಲವೆಂಬುದು ನಮಗೆ ತಿಳಿದಿದೆ ಮತ್ತು ಅದನ್ನು ನಾವು ಅಳತೆ ಮಾಡಲು ಸಾಧ್ಯವಿಲ್ಲ ಎಂದು ನಂಬಿದ್ದೇವೆ. ಆದರೆ ಗುರೂಜಿಯವರು ಹೇಳಿದ್ದರು, ನಾವು ಬೆಳಕನ್ನು ಕಳುಹಿಸುವಾಗ ನಮ್ಮ ದೇಹಗಳು ವಿದ್ಯುತ್ ಪರಿವರ್ತಕಗಳಂತೆ (transformer) ವರ್ತಿಸುತ್ತವೆ ಎಂದು. ನಾವು ಬೆಳಕನ್ನು ಪಡೆಯುವಾಗ, ಅದು ಸೂಕ್ಷ್ಮ ರೂಪದಲ್ಲಿರುತ್ತದೆ ಆದರೆ ಅದು ನಮ್ಮ ದೇಹಗಳನ್ನು ಹೊಕ್ಕು ನಂತರ ನಮ್ಮ ದೇಹಗಳಿಂದ ಹೊರ ಬರುವಾಗ, ಜನರು ಅದನ್ನು ಹೀರಿಕೊಳ್ಳಲು ಅನುವಾಗುವುದಕ್ಕಾಗಿ, ಸ್ವಲ್ಪ ಮಟ್ಟಿಗೆ ಸ್ಥೂಲವಾಗುತ್ತದೆ. ಮತ್ತು ಈ ಪ್ರಯೋಗವು, ಬೆಳಕು ಸ್ಥೂಲವಾಗುವುದನ್ನು ಸೂಚಿಸುತ್ತದೆ. ಇಲ್ಲದಿದ್ದಲ್ಲಿ, ಮೇಲೆ ಹೇಳಿದ ಪ್ರಯೋಗದಲ್ಲಿ ಬಳಸಿದ ಉಪಕರಣವು ಹೇಗೆ ತಾನೇ ಬೆಳಕನ್ನು ಗ್ರಹಿಸುತ್ತಿತ್ತು? ಅಲ್ಲಿದ್ದ ವ್ಯಕ್ತಿಯು ಒಂದು ಕತ್ತಲೆ ಕೋಣೆಯಲ್ಲಿ ಕುಳಿತಿದ್ದರು ಮತ್ತು ಎಲ್ಲಿಂದಲೂ ಬೆಳಕು ಕೋಣೆಯನ್ನು ಪ್ರವೇಶಿಸುವ ಮಾರ್ಗವಿರಲಿಲ್ಲ. ಆದರೆ, ಆ ಸಾಧಕರು ತಂತ್ರವನ್ನು ಅಭ್ಯಾಸ ಮಾಡುತ್ತಿರುವಾಗ, ಫೋಟಾನ್‌ಗಳ ಸಂಖ್ಯೆ ವೃದ್ಧಿಸಿತ್ತು. ಇದೊಂದು ಬಹಳ ಕುತೂಹಲಕಾರಿ ಪ್ರಯೋಗ.

ಈ ಬೆಳಕಿನ ಆವರ್ತನಗಳ ಬದಲಾವಣೆ ಕೇವಲ ಶರೀರ ಮಟ್ಟದಲ್ಲಿ ಮಾತ್ರವಲ್ಲ, ಮನಸ್ಸು ಮತ್ತು ಬುದ್ಧಿಗಳ ಮಟ್ಟದಲ್ಲೂ ಆಗಿರಬಹುದೆಂದು ನನ್ನ ನಂಬಿಕೆ. ನಮ್ಮ ಮನಸ್ಸುಗಳು ಮತ್ತು ಬುದ್ಧಿಗಳು ಪರಿವರ್ತಕಗಳಂತೆ (transformers) ವರ್ತಿಸಿ ಚೈತನ್ಯಗಳನ್ನು ಹರಡುತ್ತಿರಬಹುದು. ಬೆಳಕನ್ನು ಸ್ವೀಕರಿಸುವ ವ್ಯಕ್ತಿಗಳು, ಎಲ್ಲಾ ಮಟ್ಟಗಳಲ್ಲೂ ಚೈತನ್ಯಗಳನ್ನು ಪಡೆಯುತ್ತಾರೆ. ಇಂತಹ ಪ್ರಯೋಗಗಳು ನಮ್ಮ ವಿಶ್ವಾಸವನ್ನು ಗಟ್ಟಿಗೊಳಿಸುತ್ತವೆ ಮತ್ತು ಇದು ವೈಜ್ಞಾನಿಕ ದೃಷ್ಟಿಯಿಂದ ಅರ್ಥ ಮಾಡಿಕೊಳ್ಳಲು ಇಚ್ಛಿಸುವವರಿಗೆ ಸಹಾಯಕಾರಿಯಾಗಿ ಬಹುಶಃ ಅವರೂ ಸಹ ಇಂತಹ ವಿಷಯಗಳನ್ನು ಒಪ್ಪಿಕೊಳ್ಳಲು ಆರಂಭಿಸಬಹುದು. ■

## ಹೊರಗಿನವರಿಗೆ ಧ್ಯಾನಕಲಿಕೆ

ಧ್ಯಾನದ ತರಗತಿಗಳಿಗೆ ಬರಲು ಸಾಧ್ಯವಿಲ್ಲದಿರುವವರಿಗೆ ಅಂಚೆ ಮತ್ತು ಇ–ಮೇಲ್‌ಗಳ ಮೂಲಕ ಧ್ಯಾನ ಕಲಿಸಲಾಗುವುದು. ಇಂಗ್ಲೀಷ್‌ನಲ್ಲಿ (ವರ್ಷಕ್ಕೆ ರೂ. 2500), ಕನ್ನಡ, ಮರಾಠಿ ಮತ್ತು ಹಿಂದಿಯಲ್ಲಿ (ವರ್ಷಕ್ಕೆ ರೂ. 1300) ಪಾಠಗಳನ್ನು ಕಳುಹಿಸಲಾಗುವುದು. ಭಾರತ ದೇಶದಿಂದ ಹೊರಗೆ ವಾಸವಾಗಿರುವ ವಿದ್ಯಾರ್ಥಿಗಳ ವಾರ್ಷಿಕ ರಿಜಿಸ್ಟ್ರೇಶನ್ ಫ಼ೀಯು ರೂ. 4500. ಈ ಫ಼ೀನಲ್ಲಿ ವಾರ್ತಾಪತ್ರದ ಒಂದು ವರ್ಷದ ಚಂದಾದಾರಿಕೆ ಮತ್ತು ಪಠ್ಯಪುಸ್ತಕಗಳು ಸೇರಿದೆ.

ನಂತರ, ರಿಜಿಸ್ಟ್ರೇಶನ್‌ನ ವಾರ್ಷಿಕ ನವೀಕರಣದ ಫ಼ೀ ಇಂಗ್ಲೀಷ್ (ವರ್ಷಕ್ಕೆ ರೂ. 2000), ಕನ್ನಡ, ಮರಾಠಿ ಮತ್ತು ಹಿಂದಿಯಲ್ಲಿ (ವರ್ಷಕ್ಕೆ ರೂ. 900). ಭಾರತ ದೇಶದಿಂದ ಹೊರಗೆ ವಾಸವಾಗಿರುವ ವಿದ್ಯಾರ್ಥಿಗಳ ರಿಜಿಸ್ಟ್ರೇಶನ್‌ನ ವಾರ್ಷಿಕ ನವೀಕರಣದ ಫ಼ೀಯು ರೂ. 3500. ಈ ಫ಼ೀನಲ್ಲಿ ವಾರ್ತಾಪತ್ರದ ಒಂದು ವರ್ಷದ ಚಂದಾದಾರಿಕೆ ಸೇರಿದೆ.

- ★ ಎಲ್ಲಾ ಸೂಚನೆಗಳನ್ನು ಪೋಸ್ಟ್ ಅಥವಾ ಇ–ಮೇಲ್ ಮೂಲಕ (ಆಯ್ಕೆ ಮಾಡಿದಂತೆ) ಆಯಾ ಭಾಷೆಯಲ್ಲಿ ಕಳುಹಿಸಿ ಕೊಡಲಾಗುವುದು.
- ★ ಸೂಕ್ಷ್ಮ ಮಟ್ಟದಲ್ಲಿ, ಋಷಿಗಳು ದೀಕ್ಷೆಯನ್ನು ಕೊಡುತ್ತಾರೆ ಮತ್ತು ಸಾಧನೆಯ ಪ್ರಗತಿಯನ್ನು ಗಮನಿಸುತ್ತಾರೆ.
- ★ ನಮ್ಮ ಮಾರ್ಗ ಮತ್ತು ಸಾಧನೆಯನ್ನು ಸರಿಯಾಗಿ ಅರ್ಥಮಾಡಿಕೊಳ್ಳಲು ವಿದ್ಯಾರ್ಥಿಗಳು ನಮ್ಮ ಎಲ್ಲ ಪುಸ್ತಕಗಳನ್ನು ಓದಬೇಕು.
- ★ ಅಭ್ಯಾಸದ ವರದಿಗಳನ್ನು ಸಕಾಲಕ್ಕೆ ತಲುಪಿಸಬೇಕು. ಸಕಾಲಕ್ಕೆ ವರದಿ ಬಾರದಿದ್ದರೆ, ವಿದ್ಯಾರ್ಥಿ ಧ್ಯಾನ ಮಾಡುತ್ತಿಲ್ಲ ಎಂದು ಪರಿಗಣಿಸಲಾಗುತ್ತದೆ.

ಚೆಕ್/ಡಿಡಿಗಳನ್ನು 'Manasa Light Age Foundation' ಹೆಸರಲ್ಲಿ ಕಳುಹಿಸಬೇಕಾಗುತ್ತದೆ. ಬೆಂಗಳೂರೇತರ ಚೆಕ್‌ಗಳಿಗೆ 50ರೂ. ಹೆಚ್ಚಿಗೆ ಸೇರಿಸಬೇಕಾಗುತ್ತದೆ.

### ಗುರೂಜಿಯವರಿಂದ ವಿಶೇಷ ಸೂಚನೆಗಳು

- ★ ತಾಳ್ಮೆ ಇರಲಿ. ಮೊದಲನೆಯ ದಿನವೇ ಸಮಾಧಿಯ ಅನುಭವವನ್ನು ನಿರೀಕ್ಷಿಸಬೇಡಿ. ಪವಾಡಗಳನ್ನು ನಿರೀಕ್ಷಿಸಬೇಡಿ. ನಾವು ಶ್ರದ್ಧೆಯಿಂದ ಸಾಧನೆಯನ್ನು ಮುಂದುವರಿಸಿದರೆ ಪವಾಡಗಳು ಸದ್ದಿಲ್ಲದೆ ನಡೆಯುತ್ತವೆ.
- ★ ಪ್ರತಿಯೊಬ್ಬರೂ ತಮ್ಮದೇ ರೀತಿಯಲ್ಲಿ ಸೆಣಸಾಟಗಳನ್ನೆದುರಿಸುತ್ತಾರೆ. ಆದರೆ ಸಾಧನೆ ಮುಂದುವರಿದಂತೆ ಎಲ್ಲ ಕರಗಿಹೋಗುತ್ತವೆ.
- ★ ಪ್ರತಿಯೊಬ್ಬರಿಗೂ ತಮ್ಮದೇ ಆದ ಅನುಭವಗಳಾಗುತ್ತವೆ. ಆದರೆ ಅವುಗಳ ಕಡೆ ಹೆಚ್ಚು ಗಮನ ಕೊಡಬಾರದು. ಅನುಭವಗಳು ಒಳ್ಳೆಯದು. ಆದರೆ ಅವು ಸಾಧನೆಯಲ್ಲಿ ಪ್ರಗತಿಯನ್ನು ಅಳೆಯುವುದಿಲ್ಲ.
- ★ ಧ್ಯಾನ ಮಾಡುವಾಗ, ಧ್ಯಾನದ ಕ್ರಿಯೆಗಳನ್ನು ವಿಶ್ಲೇಷಿಸಬಾರದು. ವಿಶ್ಲೇಷಣೆ ಧ್ಯಾನಕ್ಕೆ ಸಹಾಯ ಮಾಡುವುದಿಲ್ಲ.
- ★ ಧ್ಯಾನ ಮಾಡುವಾಗ, ಯೋಚನೆಗಳು ಸಾಮಾನ್ಯ. ಅದರಿಂದ ತಲೆಕೆಡಿಸಿ ಕೊಳ್ಳಬಾರದು. ಯೋಚನೆಗಳನ್ನು ಓಡಿಸಲು ಪ್ರಯತ್ನ ಮಾಡಬಾರದು. ಅವುಗಳನ್ನು ಗಮನಿಸದೆ ಇರುವುದು ಉತ್ತಮ. ಬೇರೆ ದಾರಿಯೇ ಇಲ್ಲ.

## ಅಸಾಧಾರಣ ಮಾಸ್ಟರ್

**ಶ್ರುತಿ ಸುಧಾಕರ್; ಅನು: ಸುಜಾತಾ ವಿ**

ಕೌಜಲಗಿ ರಾಜವಂಶದ ಕುಟುಂಬದಲ್ಲಿ ಅಂಬರೀಷ ವರ್ಮ ದೇಸಾಯಿ 1ನೇ ಫೆಬ್ರವರಿ 1919ರಂದು ಬೆಂಗಳೂರಿನಲ್ಲಿ ಜನಿಸಿದರು. ಈ ಭೂಮಿಯ ಮೇಲೆ ಜೀವಿಸಿದಂತಹ ಅತ್ಯಂತ ಶ್ರೇಷ್ಠ ಋಷಿಗಳಲ್ಲಿ ಅವರು ಒಬ್ಬರಾಗಿದ್ದರು. ತಾವೇ ಮಹಾನ್ ಋಷಿಗಳಾಗಿದ್ದರೂ ಕೂಡ, ಅವರು ತಮ್ಮನ್ನು 'ಋಷಿಗಳ ಕಾರ್ಯಕರ್ತ' ಎಂದು ಸಂಬೋಧಿಸಿಕೊಳ್ಳುತ್ತಿದ್ದರು. ಋಷಿಗಳು ಪ್ರೀತಿಯಿಂದ ಅವರನ್ನು 'ಅಮರ' ಎಂದು ಕರೆದರು. ಇಲ್ಲಿ ನಡೆದಾಡಿದ ಕೆಲವು ಅಪರೂಪದ ವ್ಯಕ್ತಿಗಳಲ್ಲಿ ಅವರೊಬ್ಬರಾಗಿದ್ದರು – ಅವರು ತಮ್ಮ ನಿದರ್ಶನದಿಂದ ಪ್ರೀತಿಯ ಬಗ್ಗೆ, ನಮ್ರತೆಯ ಬಗ್ಗೆ ಹಾಗು ಉನ್ನತ ರೀತಿಯ ಜೀವನದ ಬಗ್ಗೆ ಕಲಿಸಿದರು.

ಗುರೂಜಿ ಕೃಷ್ಣಾನಂದರು ಮಹರ್ಷಿ ಅಮರರವರ ನೇರ ಶಿಷ್ಯರಾಗಿದ್ದರು. ಗುರೂಜಿಯವರು 1977ರಲ್ಲಿ ಅಮರರವರನ್ನು ಭೇಟಿ ಮಾಡಿದರು ಮತ್ತು ಅನೇಕ ಜನ್ಮಗಳಲ್ಲಿ ಅವರು ಅಮರರವರೊಂದಿಗಿದ್ದರೆಂದು ಅಮರರವರಿಂದ ನಂತರ ತಿಳಿದುಕೊಂಡರು.

ಮಹರ್ಷಿ ಅಮರರವರು ಯಾವಾಗಲೂ ಸಾಧಾರಣ ವ್ಯಕ್ತಿಯಂತೆ ಕಾಣಿಸಿಕೊಳ್ಳಲು ಬಯಸುತ್ತಿದ್ದರು ಮತ್ತು ಉದ್ದೇಶಪೂರ್ವಕವಾಗಿಯೇ ಅವರು ಪ್ರಚಾರದಿಂದ ದೂರವಿರುತ್ತಿದ್ದರು. ಒಮ್ಮೆ ಅವರನ್ನು ರಾಯಭಾರಿ ಸ್ಥಾನಕ್ಕೆ ಪರಿಗಣಿಸಿದರೂ, ಭೌತಿಕ ಮಟ್ಟದಲ್ಲಿ ಮತ್ತು ಸೂಕ್ಷ್ಮ ಮಟ್ಟದಲ್ಲಿ ಋಷಿಗಳ ಜೊತೆ ಕೆಲಸವನ್ನು ಮುಂದುವರಿಸುವುದಕ್ಕಾಗಿ ಅವರು ಅದನ್ನು ನಿರಾಕರಿಸಿದರು. ಅವರು ತಮ್ಮ ಪ್ರಭಾವದಿಂದ ಸುಲಭವಾಗಿ ಜನಸಮೂಹವನ್ನು ಸೇರಿಸಬಹುದಾಗಿತ್ತು, ಆದರೆ ಅವರ ಗಮನ ಋಷಿಗಳ ಸಮಿತಿ ಅವರಿಗೆ ವಹಿಸಿಕೊಟ್ಟಿದ್ದ ಕೆಲಸದ ಮೇಲಿತ್ತು, ಮತ್ತು ಸುಮ್ಮನೆ ಕುತೂಹಲಕ್ಕಾಗಿ ಬರುವ ಜನರಿಂದ ಅವರ ಕೆಲಸಕ್ಕೆ ತೊಂದರೆಯೇ ಆಗುತ್ತಿತ್ತು. ಹಾಗಿದ್ದರೂ ಅವರು ಪ್ರಾಮಾಣಿಕ ಸಾಧಕರಿಗೆ ತಮ್ಮನ್ನು ತೆರೆದಿಟ್ಟುಕೊಂಡಿದ್ದರು, ಹಾಗೂ ಸಾವಿರಾರು ಜನರಿಗೆ ಧ್ಯಾನವನ್ನು ಕಲಿಸಿದರು ಮತ್ತು ಸಾವಿರಾರು ಜನರಿಗೆ ಮುಕ್ತಿಯನ್ನು ಹೊಂದುವುದಕ್ಕೆ ಕೂಡ ಸಹಾಯ ಮಾಡಿದರು. ವ್ಯಕ್ತಿಗಳಷ್ಟೇ ಅಲ್ಲ, ದೇಶಗಳ ಮತ್ತು ಪ್ರಪಂಚದ ಹಿಂದಿನ, ಈಗಿನ ಮತ್ತು ಮುಂದಿನ ವಿಷಯಗಳನ್ನೂ ಅವರು ತಿಳಿಯಬಲ್ಲವರಾಗಿದ್ದರು.

ಅಮರರವರ ಅತೀಂದ್ರಿಯ ಸಾಹಸಗಳಂತಹ ಗೋಪ್ಯವಾದ ವಿಷಯಗಳು ಗುರೂಜಿಯವರಿಗೆ ತಿಳಿದಿತ್ತು. ಅವರ "ಆಧುನಿಕ ಋಷಿಯೊಬ್ಬರ ಅತೀಂದ್ರಿಯ ಸಾಹಸಗಳು" ಪುಸ್ತಕದಲ್ಲಿ, ಮಾಸ್ಟರ್‌ರವರ ಕೆಲವು ಕೆಲಸಗಳ ಬಗ್ಗೆ ಮತ್ತು ಅತೀಂದ್ರಿಯ ಸಾಹಸಗಳ ಬಗ್ಗೆ ಗುರೂಜಿಯವರು ಉಲ್ಲೇಖಿಸಿದ್ದಾರೆ. ಕೆಲವು ಜನರು, ಈ ಪುಸ್ತಕವನ್ನು ಓದಿದ ನಂತರ ಆಶ್ಚರ್ಯಚಕಿತರಾಗಿದ್ದಾರೆ ಮತ್ತು ಇನ್ನು ಕೆಲವರು ಈ ಚಿಕ್ಕ ಪುಸ್ತಕದಲ್ಲಿ ಉಲ್ಲೇಖಿಸಿರುವ ಅನುಭವಗಳು ಸಾಹಸಭರಿತ ರೋಮಾಂಚಕಾರಿ ಕಥೆಗಳಿಗಿಂತ ಕಡಿಮೆ ಏನಿಲ್ಲ ಎಂದು ಉದ್ಗರಿಸಿದ್ದಾರೆ.

ಅಮರರವರು, ಅವರ ಹೆಸರಿಗೆ ಯಥಾರ್ಥವಾಗಿ, ನಶ್ವರವಾಗಿ ಮತ್ತು ಶಾಶ್ವತವಾಗಿ ನಮ್ಮ ಹೃದಯದಲ್ಲಿ ಉಳಿಯುತ್ತಾರೆ ಮತ್ತು ಇಂದಿಗೂ ಕೂಡ ಸಾಧಕರು ಅಮರರವರನ್ನು ಸಂಪರ್ಕಿಸಬಹುದಾಗಿದೆ! ■

## ಅದೇ ಸತ್ಯ

**ಅಪೂರ್ವ ದೇಶ್‌ಪಾಂಡೆ; ಅನು: ಸುಜಾತಾ ವಿ**

"ನನಗೆ ಅವರು ಗೊತ್ತಿಲ್ಲ. ನಾನು ಅವರ ಹೆಸರು ಮಾತ್ರ ಕೇಳಿದ್ದೇನೆ, ಮತ್ತು ಅದು ನನ್ನ ಮನಸ್ಸನ್ನು ಅವರ ಮೇಲೆ ನೆಲೆಗೊಳಿಸಿದೆ", ಎಂದು ಭಗವಾನ್ ಶ್ರೀಕೃಷ್ಣರ ಬಗ್ಗೆ ಶ್ರೀ ರಾಮಕೃಷ್ಣರು ಹೇಳಿದರು. ನಮಗೆ ಗೊತ್ತಿರುವ ಹಾಗೆ, ಮಹರ್ಷಿ ಅಮರರವರು ಹಿಂದಿನ ಜನ್ಮದಲ್ಲಿ ಶ್ರೀ ರಾಮಕೃಷ್ಣರಾಗಿದ್ದರು.

ನಾನು ಯಾಂತ್ರಿಕವಾಗಿ ಓದಲು ಮುಂದುವರಿಸಿದರೂ, ನನ್ನ ಮನಸ್ಸು ನಾನು ಓದುತ್ತಿದ್ದ ಪದಗಳನ್ನು ದಾಖಲಿಸಲು ನಿರಾಕರಿಸುತ್ತಿತ್ತು. ನನ್ನ ಮನಸ್ಸು ಭಗವಾನ್ ಶ್ರೀಕೃಷ್ಣರ ಬಗ್ಗೆ ಶ್ರೀ ರಾಮಕೃಷ್ಣರು ಹೇಳಿದ ಪದಗಳ ಕಡೆಗೇ ಸುತ್ತಿಬರುತ್ತಿತ್ತು; ವಿಶೇಷವಾಗಿ ಅವರು ಹೇಳಿದ ಮೂರು ಪದಗಳು. "ನನಗೆ ಅವರು ಗೊತ್ತಿಲ್ಲ," – ಮಹಾನ್ ಮಾಸ್ಟರ್‌ರವರ ನಮ್ರತೆಯನ್ನು ಈ ಪದಗಳೇ ಸೂಚಿಸುತ್ತವೆ.

ನಾನು "ಬೆಳಕಿಗೆ ಬಾಗಿಲುಗಳು" ಓದಿದಾಗಲೆಲ್ಲ, ಮಹರ್ಷಿ ಅಮರರವರನ್ನು ಗುಣಪಡಿಸಲು ಶ್ರೀ ಕೃಷ್ಣರು ಅವರ ಕೊಠಡಿಗೆ ಬರುವುದನ್ನು ಓದಿದಾಗ ಪ್ರತಿಬಾರಿಯೂ ನನಗೆ ರೋಮಾಂಚನವಾಗುತ್ತದೆ. ಮಹರ್ಷಿ ಅಮರರವರನ್ನು ಶ್ರೀ ಕೃಷ್ಣರು ತಬ್ಬಿಕೊಳ್ಳುವುದನ್ನು ಓದಿದಾಗ ಅನಿಯಂತ್ರಿತವಾಗಿ ಕಣ್ಣೀರು ಬರುತ್ತದೆ. ಗುರೂಜಿ ಹಾಗೂ ಮಹರ್ಷಿ ಅಮರರವರಂತಹ ಮಹಾನ್ ಮಾಸ್ಟರ್‌ಗಳು ಯಾವಾಗಲೂ ದೇವರ ಜೊತೆ ಸಂಪರ್ಕದಲ್ಲಿರುತ್ತಾರೆ, ಆದರೂ ಅವರು ಹೇಳುತ್ತಾರೆ, "ನನಗೆ ಅವರು ಗೊತ್ತಿಲ್ಲ."

ನಾನು ಶ್ರೀಕೃಷ್ಣರನ್ನು ಎಂದಾದರೂ ನೋಡಿದ್ದೆನಾಗಿದ್ದರೆ ನಾನು ಹೇಗೆ ಪ್ರತಿಕ್ರಿಯಿಸುತ್ತಿದ್ದೆ ಎಂದು ನಾನು ಯೋಚಿಸಿದೆ. ಬಹುಶಃ ಇಡೀ ಪ್ರಪಂಚವೇ ನೋಡಲೆಂದು ನಾನು ಅದನ್ನು ಗೌರವಾರ್ಥ ಬ್ಯಾಡ್ಜ್‌ನಂತೆ ಧರಿಸಿಕೊಳ್ಳುತ್ತಿದ್ದೆ, ಮತ್ತು ಪ್ರಪಂಚವು ಅದನ್ನು ನೋಡಲು ವಿಫಲವಾದರೆ, ಬಹುಶಃ ಅದನ್ನು ಪ್ರತಿ ಸಂಭಾಷಣೆಯಲ್ಲಿಯೂ ತರುವ ಮಾರ್ಗವನ್ನು ಕಂಡುಹಿಡಿಯುತ್ತಿದ್ದೆ. ಇದೇ ನನ್ನನ್ನು ಒಬ್ಬ ಸಾಮಾನ್ಯ ವ್ಯಕ್ತಿಯನ್ನಾಗಿ ಮಾಡುವುದು ಮತ್ತು ಮಹರ್ಷಿ ಅಮರರವರನ್ನು ಮಹಾನ್ ಮಾಸ್ಟರ್ ಅನ್ನಾಗಿ ಮಾಡುವುದು.

ಒಂದು ವಾಕ್ಯ ಹೇಗೆ ನನ್ನಲ್ಲಿ ಅಷ್ಟೊಂದು ಸಾಲುಗಳನ್ನು ಯೋಚಿಸುವಂತೆ ಮಾಡಿತು ಎಂದು ನನಗೆ ನಗು ಬಂತು. ಅಮರರವರು ಆಡಿದ ಪ್ರತಿ ಮಾತು ವೇದವಿದ್ದಂತೆ ಎಂದು ಗುರೂಜಿಯವರು ಬಹಳ ಬಾರಿ ಹೇಳುತ್ತಿದ್ದರು. ನಾವು ಗುರೂಜಿಯವರ ಮೂಲಕ ಮಾತ್ರ ಅಮರರವರನ್ನು ಭೇಟಿ ಮಾಡಿದ್ದೇವೆ, ಆದರೂ ನಮ್ಮ ಮನಸ್ಸು, ನಮ್ಮ ಆತ್ಮ, ನಮ್ಮ ಇಡೀ ವ್ಯಕ್ತಿತ್ವ "ಅವರ ಮೇಲೆ ಸ್ಥಿರವಾಗಿದೆ". ಬಹುಶಃ ಮಹರ್ಷಿ ಅಮರರವರ ಮೇಲಿದ್ದ ಗುರೂಜಿಯವರ ಸಾಂಕ್ರಾಮಿಕ ಪ್ರೀತಿಯೇ ನಾವು ಅವರನ್ನು ಪ್ರೀತಿಸುವ ಹಾಗೆ ಮಾಡಿದೆ.

ನಾವು ಅವರನ್ನು ಭೇಟಿ ಮಾಡದೆ ಇರಬಹುದು, ಆದರೆ ಅವರ ಮಾತು ಮಂತ್ರವಿದ್ದಂತೆ. ನಾವು ಅವರನ್ನು ಭೇಟಿ ಮಾಡದೆ ಇರಬಹುದು, ಮಹರ್ಷಿ ಅಮರರವರು ಏನು ಹೇಳಿದರೋ ಅದು ಸತ್ಯವೆಂದು, ಉನ್ನತವಾದ ಸತ್ಯವೆಂದು, ಅದೇ ಸತ್ಯವೆಂದು ನಮಗೆ ಲವಲೇಶವೂ ಅನುಮಾನವಿಲ್ಲ. ■

## ಪ್ರಶ್ನೋತ್ತರಗಳು

**ಜಯಂತ್ ದೇಶ್‌ಪಾಂಡೆ**
**ಸಂ: ಶೋಭಾ ಕೆ. ರಾವ್; ಅನು: ಪಾಂಡುರಂಗ**

**ಪ್ರ: ಮೇಕೆಗಳನ್ನು ಸಾಕುವುದರಿಂದ ನಾವು ಕರ್ಮಗಳನ್ನು ಪಡೆಯುತ್ತೇವೆಯೇ?**

ಉ: ಮೇಕೆಗಳನ್ನು ಸಾಕಿ ನಂತರ ಅವುಗಳನ್ನು ಮಾರುವ ಜನರಿದ್ದಾರೆ. ಆ ಮೇಕೆಗಳನ್ನು ಹತ್ಯೆ ಮಾಡುತ್ತಾರೆಂದು ಅವರಿಗೆ ಚೆನ್ನಾಗಿ ತಿಳಿದಿರುತ್ತದೆ. ನನಗನಿಸುವಂತೆ ಅವರು ಕರ್ಮಗಳನ್ನು ಸಂಪಾದಿಸುವುದಿಲ್ಲ. ಅವರ ಜೀವನೋಪಾಯಕ್ಕಾಗಿ ಇದನ್ನು ಮಾಡುತ್ತಿದ್ದಾರೆ. ಇದೇ ಅವರ ವೃತ್ತಿ. ಕಟುಕನು ಸಹ ಕರ್ಮಗಳನ್ನು ಸಂಪಾದಿಸುವುದಿಲ್ಲವೆಂದು ಗುರೂಜಿಯವರು ಸ್ಪಷ್ಟಪಡಿಸಿದ್ದಾರೆ.

**ಪ್ರ: ನಮ್ಮ ಪ್ರಾರ್ಥನೆಗಳಿಗೆ ಋಷಿಗಳು ಹೇಗೆ ಉತ್ತರಿಸುತ್ತಾರೆ? ನಮ್ಮ ಪ್ರಾರ್ಥನೆಗಳನ್ನು ಅವರು ಕೇಳಿಸಿಕೊಂಡಿದ್ದಾರೆಂದು ನಮಗೆ ಹೇಗೆ ಗೊತ್ತಾಗುತ್ತದೆ? ಬಹಳಷ್ಟು ಪ್ರಾರ್ಥನೆಗಳು ಮತ್ತು ಪ್ರಯತ್ನಗಳ ನಂತರವೂ ಪರಿಸ್ಥಿತಿಗಳು ಬದಲಾಗದಿದ್ದರೆ ಏನು ಮಾಡಬೇಕು?**

ಉ: ಪ್ರಾರ್ಥನೆಗಳನ್ನು ಯಾವಾಗಲೂ ಕೇಳಿಸಿಕೊಳ್ಳುತ್ತಾರೆ. ಪಿಸುಮಾತನ್ನು ಕೂಡ ದೇವರು ಕೇಳಿಸಿಕೊಳ್ಳುತ್ತಾನೆಂದು ಗುರೂಜಿಯವರು ಹೇಳುತ್ತಿದ್ದರು. ನಾವು ಪ್ರಾರ್ಥಿಸದಿದ್ದರೂ ಕೂಡ ನಮ್ಮ ಅವಶ್ಯಕತೆಗಳು ಅವನಿಗೆ ತಿಳಿದಿರುತ್ತದೆ ಹಾಗೂ ಸಹಾಯವನ್ನು ಮಾಡುತ್ತಾನೆ. ನಾವು ಹೆಚ್ಚು ಧ್ಯಾನ ಮಾಡಬೇಕು, ಹೆಚ್ಚು ಸಕಾರಾತ್ಮಕರಾಗಬೇಕು. ಹೆಚ್ಚು ಪ್ರಯತ್ನ ಮಾಡಬೇಕು ಮತ್ತು ಕಾಯಬೇಕು. ಸರಿಯಾದ ಸಮಯದಲ್ಲಿ ಪರಿಸ್ಥಿತಿಗಳು ಬದಲಾಗುತ್ತವೆ.

**ಪ್ರ: ಒಂದು ವೇಳೆ ಆತ್ಮ ಮರು ಜನ್ಮ ಪಡೆದಿದ್ದರೆ, ಅಗಲಿದ ವ್ಯಕ್ತಿಗೆ ಅರ್ಪಿಸಿದ ಪ್ರೀತಿ ಮತ್ತು ಚೈತನ್ಯಗಳು ಆ ಆತ್ಮಕ್ಕೆ ತಲುಪುತ್ತದೆಯೇ?**

ಉ: ಆಗಲೂ ಕೂಡ ನಾವು ಅರ್ಪಿಸಿದ ಪ್ರೀತಿ ಮತ್ತು ಚೈತನ್ಯಗಳು ಅವರನ್ನು ತಲುಪುತ್ತವೆ. ಪಿತೃದೇವತೆಗಳಿದ್ದಾರೆ, ಅವರು ಚೈತನ್ಯಗಳನ್ನು ಸ್ವೀಕರಿಸಿ ಆತ್ಮವು ಎಲ್ಲಿಯೇ ಇದ್ದರೂ ಹೇಗಾದರೂ ತಲುಪಿಸಲು ಸಮರ್ಥರಿದ್ದಾರೆಂದು ಗುರೂಜಿಯವರು ಹೇಳಿದ್ದರು.

**ಪ್ರ: ವ್ಯಕ್ತಿಯೊಬ್ಬನು ಮೃತಪಟ್ಟ ನಂತರ, ಅವನ ಆತ್ಮ ಹತ್ತು ದಿನಗಳ ಕಾಲ ಇಲ್ಲಿಯೇ ಇರುವ ಸಮಯದಲ್ಲಿ, ಆ ಆತ್ಮವು ತನ್ನ ಪ್ರೀತಿಪಾತ್ರರ ಸಂಪರ್ಕಕ್ಕೆ ಬಂದು ಅವರಲ್ಲಿ ಗೊಂದಲ ಸೃಷ್ಟಿಸಬಲ್ಲದೆ?**

ಉ: ಯಮಧರ್ಮ ಲೋಕದಿಂದ ಬರುವ ಮಾರ್ಗದರ್ಶಿಗಳು ಈ ರೀತಿ ಆಗುವುದಕ್ಕೆ ಬಿಡುವುದಿಲ್ಲ. ಆದರೆ, ಹತ್ತು ದಿನಗಳವರೆಗೆ ಆತ್ಮವು ಇಲ್ಲಿಯೇ ಇದ್ದಾಗ, ವ್ಯಕ್ತಿಯೊಬ್ಬರು ಅಗಾಧವಾದ ಪ್ರೀತಿಯಿಂದ ಆತ್ಮವನ್ನು ಸಂಪರ್ಕಿಸಬಹುದು ಎಂದು ನಾನು ನಂಬುತ್ತೇನೆ. ಪ್ರೀತಿ ಇದ್ದಲ್ಲಿ ಎಲ್ಲವೂ ಸಾಧ್ಯ.

ಗುರೂಜಿಯವರಿಗೆ ಪರಿಚಯವಿದ್ದ ಜನರು ತಮ್ಮ ಶರೀರವನ್ನು ಬಿಟ್ಟಾಗ, ಗುರೂಜಿಯವರಿಗೆ ಅವರೊಂದಿಗೆ ಮಾತನಾಡಲು ಸಾಧ್ಯವಾಗುತ್ತಿತ್ತು. ಬಹಳ ಅಪರೂಪದ ಸನ್ನಿವೇಶಗಳಲ್ಲಿ, ಇಲ್ಲಿ ಹತ್ತು ದಿನಗಳನ್ನು ಕಳೆದಾದ ಮೇಲೆ ಈ ಭೂಮಿಯನ್ನು ಬಿಟ್ಟು ಹೋದ ಆತ್ಮಕ್ಕೂ ಕೂಡ ಗುರೂಜಿಯವರ ಮೂಲಕ ಸಂಪರ್ಕಿಸಲು ಅವಕಾಶ ಮಾಡಿಕೊಡಲಾಗುತ್ತಿತ್ತು. ಅಂತಹ ಕಾರ್ಯಗಳು ಋಷಿಗಳೊಂದಿಗೆ ಮಾತ್ರ ಮತ್ತು ಉನ್ನತ ಉದ್ದೇಶಗಳಿದ್ದರೆ ಮಾತ್ರ ಸಾಧ್ಯ. ಶರೀರವನ್ನು ಬಿಟ್ಟು ಹೋದ ಆತ್ಮಗಳು ಸಾಮಾನ್ಯವಾಗಿ ಸಂತೋಷದಿಂದ ಇರುತ್ತವೆ. ಸೂಕ್ಷ್ಮ ಮಟ್ಟದಲ್ಲಿ ಅನೇಕ ವಿಷಯಗಳು ಅವುಗಳ ಅರಿವಿಗೆ ಬರುತ್ತವೆ. ಅನೇಕ ಉನ್ನತ ವಾಸ್ತವಗಳು ಅವುಗಳ ಅರಿವಿಗೆ ಬರುತ್ತವೆ, ಆಗ ಅವುಗಳ ಆಸ್ತಿಗಳು ಮುಂತಾದ ಈ ಭೂಮಿಗೆ ಸಂಬಂಧಪಟ್ಟ ಯಾವುದೇ ವಿಷಯಗಳ ಬಗ್ಗೆ ಅವುಗಳಿಗೆ ಆಸಕ್ತಿ ಇರುವುದಿಲ್ಲ.

**ಪ್ರ: ಬೇರೆಯವರು ಉದ್ದೇಶಪೂರ್ವಕವಾಗಿ ನಮಗೆ ತೊಂದರೆ ಮಾಡಿದ್ದಕ್ಕಾಗಿ ನಾವು ಕೋಪಮಾಡಿಕೊಳ್ಳುವುದು ಸರಿಯೇ?**

ಉ: ಹೌದು, ಅನ್ಯಾಯದ ವಿರುದ್ಧ ನಾವು ಕೋಪ ಮಾಡಿಕೊಳ್ಳಬೇಕು. ಅದನ್ನು ವ್ಯಕ್ತಪಡಿಸಲು ನಮಗೆ ಸಾಧ್ಯವಾಗಬಹುದು ಅಥವ ಸಾಧ್ಯವಾಗದಿರಬಹುದು. ಅದು ಬೇರೆ ವಿಷಯ. ಆದರೆ ನಾವು ಕೋಪ ಮಾಡಿಕೊಳ್ಳಬೇಕು. ಮಾನಸಿಕವಾಗಿ ಆ ಅನ್ಯಾಯವನ್ನು ತಿರಸ್ಕರಿಸಬೇಕು, ಆ ವ್ಯಕ್ತಿಯನ್ನಲ್ಲ.

**ಪ್ರ: ಆತ್ಮ ಸಂಗಾತಿಗಳು ಮದುವೆಯಾಗಬೇಕೆ? ಅವರು ಒಂದೇ ವಯಸ್ಸಿನವರಾಗಿರುತ್ತಾರೆಯೇ?**

ಉ: ಆತ್ಮ ಸಂಗಾತಿಗಳು ಸಾಮಾನ್ಯವಾಗಿ ಮದುವೆಯಾಗುತ್ತಾರೆ. ಅವರು ಒಂದೇ ವಯಸ್ಸಿನವರಾಗಿರಬೇಕಿಲ್ಲ.

**ಪ್ರ: ಆತನ ಅಥವ ಆಕೆಯ ಆತ್ಮ ಸಂಗಾತಿಯನ್ನು ಬಿಟ್ಟು ಬೇರೊಬ್ಬ ವ್ಯಕ್ತಿಯನ್ನು ಕೆಲವೊಮ್ಮೆ ಮದುವೆಯಾಗುತ್ತಾರೆಯೇ? ಹಾಗೆ ಆಗುತ್ತದೆಯೇ?**

ಉ: ನಾವು ಗುರೂಜಿಯವರಿಂದ ತಿಳಿದಿರುವಂತೆ, ಸಾಮಾನ್ಯವಾಗಿ ಆತ್ಮ ಸಂಗಾತಿಗಳು ಮದುವೆಯಾಗುತ್ತಾರೆ, ಆದರೆ ವಿಶೇಷ ಸಂದರ್ಭಗಳಲ್ಲಿ ಅವರು ಮದುವೆಯಾಗುವುದಿಲ್ಲ ಅಥವ ಅವರು ಬೇರೊಬ್ಬರನ್ನು ಮದುವೆಯಾಗುತ್ತಾರೆ.


**ಪ್ರ: ವಿಶ್ವವ್ಯಾಪಿ ನಿಶ್ಚಲತೆ ಅಂದರೆ ಏನು?**

ಉ: ಈ ಸೌರ ಮಂಡಲದ ಮಧ್ಯಭಾಗದಲ್ಲಿ ನಿಶ್ಚಲತೆ ಇದೆ. ಇದೇ ರೀತಿ, ಈ ತಾರಾಪುಂಜದ (galaxy) ಮಧ್ಯಭಾಗದಲ್ಲಿ ನಿಶ್ಚಲತೆ ಇದೆ. ಇದೇ ರೀತಿ ಈ ವಿಶ್ವದ ಮಧ್ಯಭಾಗದಲ್ಲಿ ನಿಶ್ಚಲತೆ ಇದೆ. ಬಹುಶಃ ಈ ವಿಶ್ವದ ಮಧ್ಯಭಾಗದಲ್ಲಿರುವ ನಿಶ್ಚಲತೆಯನ್ನೇ ವಿಶ್ವವ್ಯಾಪಿ ನಿಶ್ಚಲತೆಯೆಂದು ಕರೆಯುತ್ತಾರೆ. ■


## ನಮ್ಮ ಪ್ರಕಟಣೆಗಳು

| | |
|---|---|
| Doorways to Light | 200/- |
| New Age Realities | 200/- |
| Higher Communication & Other Realities | 100/- |
| Light Body & Other Realities | 100/- |
| Master-Pupil Talks | 60/- |
| Master-Pupil Talks - Vol 2 | 75/- |
| iGuruji Vol 1,3,4 & 7 | each 150/- |
| iGuruji - Vol 2 | 120/- |
| iGuruji - Vol 5 | 100/- |
| iGuruji - Vol 6 | 75/- |
| Living in the Light of My Guru | 220/- |
| How to Meditate | 50/- |
| Dhyana Yoga | 50/- |
| Descent of Soul | 50/- |
| Practising Shambala Principles | 50/- |
| Astral Ventures of A Modern Rishi | 50/- |
| Channelled Knowledge from the Rishis-Vol 2 | 150/- |
| Channelled Knowledge from the Rishis-Vol 3 & 4 | each 200/- |
| Guruji Speaks Part - I & II | each 200/- |
| Guruji Speaks (Vol 3) | 150/- |
| Guruji Speaks (Vol 4) | 250/- |
| Guruji Speaks (Vol 5 & 7) | each 200/- |
| The Book of Reflections - Vol 1 & 2 | each 200/- |
| The Book of Reflections - Vol 3 | 150/- |
| Meditators on Meditations | 75/- |
| Meditators on Experiences | 75/- |
| Meditational Experiences - Vol 1 & 2 | each 150/- |
| Awareness | 60/- |
| Living in Light | 10/- |
| Light | 10/- |
| Quotes from the Rishis - Vol 1 & 2 | each 100/- |
| Pyramid Revelations | 100/- |
| Thus Spoke Guruji Krishnananda - Vol 1 & 4 | each 200/- |
| Thus Spoke Guruji Krishnananda - Vol 2 & 3 | each 250/- |
| ಬೆಳಕಿಗೆ ಬಾಗಿಲುಗಳು | 150/- |
| ಋಷಿಗಳಿಂದ ಬಂದ ಜ್ಞಾನ | 150/- |
| ಋಷಿಗಳಿಂದ ಬಂದ ಜ್ಞಾನ – ಭಾಗ 2 | 150/- |
| ಗುರು–ಶಿಷ್ಯರ ಸಂಭಾಷಣೆ | 60/- |
| ಐ–ಗುರೂಜಿ ಭಾಗ 1 | 150/- |
| ಐ–ಗುರೂಜಿ ಭಾಗ 2 | 120/- |
| ಹೊಸ ಯುಗದ ವಾಸ್ತವಗಳು | 120/- |
| ಉನ್ನತ ಸಂಪರ್ಕಗಳು | 100/- |
| ಅನಿಸಿಕೆಗಳು | 120/- |
| ಧ್ಯಾನ ಮಾಡುವುದು ಹೇಗೆ | 50/- |
| ಧ್ಯಾನ ಯೋಗ | 50/- |
| ಆತ್ಮದ ಅವರೋಹಣ | 50/- |
| ಶಂಬಲ ನಿಯಮಗಳ ಅಭ್ಯಾಸ | 50/- |
| ಆಧುನಿಕ ಋಷಿಯೊಬ್ಬರ ಅತೀಂದ್ರಿಯ ಸಾಹಸಗಳು | 50/- |
| ಗುರೂಜಿ ನಾ ಕಂಡಂತೆ | 30/- |
| ಬೆಳಕಿನಲ್ಲಿ ಬದುಕುವುದು | 10/- |
| ಬೆಳಕು | 10/- |
| ದೈವಸಾಕ್ಷಾತ್ಕಾರಕ್ಕೆ ರಾಮಕೃಷ್ಣರ ಮಾರ್ಗದರ್ಶನ | 250/- |
| ಕಾವ್ಯಕಂಠ ವಸಿಷ್ಠ ಗಣಪತಿ ಮುನಿಗಳು | 100/- |
| ಆನೇಕಲ್ಲಿನ ಅಪರೂಪದ ವ್ಯಕ್ತಿಗಳು | 120/- |
| ಬೆಳಕಿನ ಶರೀರ ಮತ್ತು ಇತರ ವಾಸ್ತವಗಳು | 100/- |
| प्रकाशवाट (Marathi) | 150/- |
| आयगुरूजी (Marathi) | 100/- |
| ध्यान कसे करावे (Marathi) | 50/- |
| ध्यानयोग (Marathi) | 50/- |
| आत्म्याचे पृथ्वीवर अवतरण (Marathi) | 50/- |
| शंबला तत्वांचा अभ्यास (Marathi) | 50/- |
| एका आधुनिक ऋषीचे | |
| सूक्ष्मजगातील पराक्रम (Marathi) | 50/- |
| प्रकाशमय जीवन (Marathi) | 10/- |
| प्रकाश (Marathi) | 10/- |
| उच्चस्तरीय संवाद आणि इतर सत्ये (Marathi) | 100/- |
| गुरु–शिष्य संवाद (Marathi) | 60/- |
| ध्यान कैसे करे (Hindi) | 50/- |
| ध्यान-योग (Hindi) | 50/- |
| प्रकाश (Hindi) | 10/- |
| प्रकाशमय जीवन (Hindi) | 10/- |
| प्रकाश की ओर (Hindi) | 150/- |
| आत्मा का अवतरण (Hindi) | 50/- |
| தியானம் செய்வது எப்படி | 50/- |
| ஒளியின் வாயில்கள் | 200/- |
| தியான யோகம் | 50/- |
| ஆத்மாவின் அவரோகணம் | 50/- |
| நவீன ரிஷி ஒருவரின் சூஷ்ம சாகசங்கள் | 50/- |
| சம்பலா நியமங்களின் அப்பியாசங்கள் | 50/- |
| ధ్యానం చేయ్యడం ఎలా | 50/- |
| కాంతికి ద్వారములు | 100/- |

Published: 21st of Every Month. RNI. No. KARKAN/2003/13739 Regd. Postal Regn. No. KRNA/BGE/1124/ 2020-2022
Date of posting Newsletter-25th or 27th or 29th of Every Month. Posted at Bangalore PSO, Bg-560026 No. of Pages-8



ಗುರೂಜಿ ಕೃಷ್ಣಾನಂದ (1939 - 2012)

### ಮಾನಸ ಫೌಂಡೇಶನ್ (ರಿ)

1988ರಲ್ಲಿ ಗುರೂಜಿ ಕೃಷ್ಣಾನಂದರಿಂದ ಸ್ಥಾಪನೆಯಾದ ಈ ಸಂಸ್ಥೆ ಜ್ಯೋತಿಕಾರ್ಯಕ್ಕೆ ಮೀಸಲಾಗಿದ್ದು, ತಪೋನಗರ ಮತ್ತು ಬೆಂಗಳೂರಿನಲ್ಲಿ ಧ್ಯಾನ ತರಗತಿಗಳನ್ನು ನಡೆಸುತ್ತದೆ.

### ತಪೋನಗರ

ಬೆಂಗಳೂರಿನಿಂದ ಇಪ್ಪತ್ತು ಕಿಲೋಮೀಟರ್ ದೂರದ ಚಿಕ್ಕಗುಬ್ಬಿ ಹಳ್ಳಿಯ ಬಳಿ ರೂಪುಗೊಳ್ಳುತ್ತಿರುವ ಧ್ಯಾನಾಭ್ಯಾಸಿಗಳ ಬಡಾವಣೆ. 1935ರಲ್ಲಿ ಅಮರರಿಗೆ ಇಲ್ಲಿ ಋಷಿಗಳ ಚಟುವಟಿಕೆಗಳ ಮತ್ತು ಭವಿಷ್ಯದಲ್ಲಿ ಸ್ಥಾಪನೆಯಾಗುವ ಬೆಳಕಿನ ನಗರದ ದರ್ಶನವಾಗಿತ್ತು. ವಿಶ್ವಚೇತನ ಮಂದಿರ, ಕುಂಡಲಿನಿ ಗೋಪುರ ಮತ್ತು ತಪೋವನ ಇಲ್ಲಿ ಧ್ಯಾನಮಾಡಲು ರೂಪುಗೊಂಡಿರುವ ವಿನೂತನ ಸ್ಥಳಗಳು. ತಪೋನಗರದ ಸುತ್ತಲೂ 'ಮಾನಸಿ' ಎಂಬ ವಿಭಿನ್ನ ಚೈತನ್ಯವಲಯವನ್ನು ನಿರ್ಮಿಸಿ, ಅದರಲ್ಲಿ ವಿಶೇಷ ಚೈತನ್ಯಗಳನ್ನು ಸಂಗ್ರಹಿಸಿಡಲಾಗಿದೆ.

### ಅಂತರ್ ಮಾನಸ

ಮಾನಸದ ಹುಟ್ಟು ಸ್ಥಳ. ಇದು ತಪೋನಗರದಿಂದ ಒಂದು ಕಿಲೋಮೀಟರ್ ದೂರದಲ್ಲಿರುವ ನಾಡಗೌಡ ಗೊಲ್ಲಹಳ್ಳಿಯ ಹತ್ತಿರ ಇದೆ. ಅಲ್ಲಿ ಗುರೂಜಿಯವರು 1987 ರಿಂದ 1992 ರವರೆಗೆ ವಾಸಮಾಡಿದ ಒಂದು ಗುಡಿಸಲು ಮತ್ತು ಇತರೆ ಕಟ್ಟಡಗಳಿವೆ.

### ಅಧ್ಯಯನ ಕೇಂದ್ರ

ಇದು ಆಧ್ಯಾತ್ಮಿಕ ಸತ್ಯಗಳ ಅಧ್ಯಯನಕ್ಕಾಗಿ ಅಂತರ್ ಮಾನಸದಲ್ಲಿ ಋಷಿಗಳ ಮಾರ್ಗದರ್ಶನದಲ್ಲಿರುವ ಒಂದು ವಿಶೇಷವಾದ ಅಧ್ಯಯನ ಕೇಂದ್ರ.

### ಜ್ಯೋತಿ ಪ್ರಾಜೆಕ್ಟ್

ಇದು ಮುಖ್ಯವಾಗಿ ಹಳ್ಳಿಯ ಮಕ್ಕಳಿಗೆ ಮೀಸಲಾದದ್ದು. ಅವರಿಗೆ ಶಾಲೆಯ ಪಾಠಗಳಲ್ಲಿ ನೆರವಾಗುವುದಲ್ಲದೆ ಶ್ಲೋಕಗಳು, ಶುಚಿತ್ವ, ಹಾಡುಗಳು, ಸಾಮಾನ್ಯಜ್ಞಾನ ಇತ್ಯಾದಿಗಳನ್ನು ಕಲಿಸಲಾಗುತ್ತದೆ. ಅಲ್ಲದೆ ಕಥೆಗಾರಿಕೆ, ಸಂಗೀತ ಮತ್ತು ಚಿತ್ರಕಲೆಗಳ ಮೂಲಕ ಅವರಲ್ಲಿನ ಸೃಜನಶೀಲತೆಯನ್ನು ವ್ಯಕ್ತಪಡಿಸಲು ಪ್ರೋತ್ಸಾಹಿಸಲಾಗುತ್ತದೆ.

### ಸಾರ್ವಜನಿಕರು

ಎಲ್ಲ ದಿನಗಳಲ್ಲೂ ಬೆಳಿಗ್ಗೆ 10ರಿಂದ 5ರ ನಡುವೆ ಧ್ಯಾನಮಾಡಲು ಇಲ್ಲಿಗೆ ಬರಬಹುದು.

### ವಿನಂತಿ

ದಯವಿಟ್ಟು ನಮ್ಮ ಸೇವಾಕಾರ್ಯಗಳಿಗೆ ನೆರವಾಗಿ. ('Manasa Foundation' ಹೆಸರಿನಲ್ಲಿ ಚೆಕ್/ಡಿಡಿ ಪಡೆಯಬಹುದು. 80–G ನಿಯಮದಡಿ ಆದಾಯ ತೆರಿಗೆಯ ರಿಯಾಯಿತಿ ಇದೆ.)

## ಸಾಧಕರ ಆಧ್ಯಾತ್ಮಿಕ ಅನುಭವಗಳು ಮತ್ತು ಅವರ ಪತ್ರಗಳಿಂದ ಆಯ್ದ ಭಾಗಗಳು

ಸಂ. ಶೋಭಾ ಕೆ. ರಾವ್; ಅನು: ಸ್ವರ್ಣಲತಾ

ಒಂದು ದಿನ ನನ್ನ ಹಂತದ ಧ್ಯಾನದ ಪ್ರಾರಂಭದಲ್ಲಿ ನಾನು ಬಹಳ ಭಾವಾತ್ಮಕಳಾಗಿದ್ದೆ. ನಾನು ಸ್ವಲ್ಪ ದುಃಖದಲ್ಲಿದ್ದೆನೋ ಅಥವ ದೇವರಲ್ಲಿಯೇ ಮುಳುಗುವ ಬಯಕೆಯಿತ್ತೋ ನೆನಪಾಗುತ್ತಿಲ್ಲ. ಹೃದಯದಾಳದಿಂದ ದೇವರೊಂದಿಗೆ ಮಾತನಾಡಿ ಹೇಳಿದೆ, "ಓ ದೇವನೇ, ನನ್ನನ್ನು ನಿನ್ನ ತೋಳ್ಗಳಲ್ಲಿ ಬಂಧಿಸು!" ತ್ರಾಟಕವನ್ನು ಮಾಡಿ ಕಣ್ಣುಗಳನ್ನು ಮುಚ್ಚುವಷ್ಟರಲ್ಲೇ ವೇಗವಾಗಿ ದೇವರ ತೋಳಿನೊಳಕ್ಕೆ ಸೇರಿ ಹೋದಂತಹ ಅನುಭವವಾಯಿತು! ಇದು ಒಂದು ಅಪೂರ್ವವಾದ ಹಾಗೂ ಸುಂದರವಾದ ಭಾವಾನುಭವ! ಒಂದೇ ಕ್ಷಣದಲ್ಲಿ ದೇವರಲ್ಲಿ ಕರಗಿಹೋಗಿ ಆಳವಾದ ಧ್ಯಾನಕ್ಕೆ ಜಾರಿದೆ.

ನನಗೆ ಎಲ್ಲ ಕಡೆಯೂ ಮತ್ತು ಎಲ್ಲದರಲ್ಲೂ ದೇವರ ಇರುವಿಕೆಯು ಅರಿವಾಗಿದೆ. ನನ್ನ ಸುತ್ತಮುತ್ತಲಿನ ವಸ್ತುಗಳೊಂದಿಗೆ ಬೆರೆಯಲು ಈ ಅರಿವು ಸುಲಭ ಸಾಧ್ಯ ಮಾಡಿದೆ. ನಾನು ಹೆಚ್ಚು ಮೌನವಾಗಿರುತ್ತೇನೆ. ಸಂವಹನಗಳು ಕಡಿಮೆಯಾಗಿರುವ ಈ ಹೊಸ ಹಂತದಲ್ಲಿ ನಾನು ತೃಪ್ತಿಯಿಂದಿದ್ದೇನೆ ಮತ್ತು ಪೂರ್ಣತೆಯ ಭಾವವಿದೆ! ಧ್ಯಾನದಲ್ಲಿ ಆಳವಾದ ಸ್ಥಿರತೆ ಹಾಗೂ ವಿಶಾಲತೆಯ ಅನುಭವ ಒಂದು ಹಂತದಲ್ಲಿದ್ದು ಮತ್ತೊಂದು ಹಂತದಲ್ಲಿ ಸುತ್ತಮುತ್ತಲಿನ ಅರಿವು ಜಾಗೃತವಾಗಿರುತ್ತದೆ.

– ವಿದ್ಯಾ ವೀರ್‌ಕರ್

ನಾನು ಮಾನಸ ಫೌಂಡೇಶನ್‌ಗೆ ಸ್ವಲ್ಪ ಹಣವನ್ನು ಕೊಡುಗೆಯಾಗಿ ನೀಡಿದ್ದೆ. ಆಶ್ಚರ್ಯವೆಂದರೆ ಅದರ ಮುಂದಿನ ವಾರವೇ, ನನಗೆ ಅಷ್ಟೇ ಹಣ, ವಾಸ್ತವದಲ್ಲಿ ಸ್ವಲ್ಪ ಹೆಚ್ಚಾಗಿಯೇ, ನಾನು ಮಾಡಿದ ನನ್ನ ಕಛೇರಿಯ ಒಂದು ಕೆಲಸಕ್ಕೆ ಮೆಚ್ಚುಗೆ ಸೂಚಿಸುವ ರೂಪದಲ್ಲಿ ದೊರೆಯಿತು. ನನಗೆ ಅದರ ನಿರೀಕ್ಷೆ ಎಂದಿಗೂ ಇರಲಿಲ್ಲ! ಋಷಿಗಳು ನಮ್ಮನ್ನು ಖಂಡಿತವಾಗಿಯೂ ಗಮನಿಸುತ್ತಿದ್ದು ನಮ್ಮ ಜೀವನದಲ್ಲಿ ಎಲ್ಲದರಲ್ಲೂ ಮೇಲೆತ್ತುವರೆಂದು ಅನ್ನಿಸಿತು. ಈ ಸಪ್ತ ಋಷಿಗಳ ಮಾರ್ಗದಲ್ಲಿರುವುದು ನನ್ನ ಅದೃಷ್ಟ.

ನಾನು ಒಬ್ಬ ಗ್ರಾಹಕರೊಡನೆ ಅತ್ಯಂತ ಕಠಿಣವಾದ ಸಂದರ್ಭದಲ್ಲಿ ಸಿಕ್ಕಿಕೊಂಡಿದ್ದೆ. ಅಂದು ರಾತ್ರಿ ನಾನು ಬೆಳಕನ್ನು ಚಾನಲ್ ಮಾಡಲಾರಂಭಿಸಿದೆ, ಅದೃಷ್ಟವಶಾತ್, ಋಷಿಗಳ ಕೃಪೆಯಿಂದಾಗಿ, ನನಗೆ ಅವರೊಡನೆ ವ್ಯವಹರಿಸಲು ಬೇಕಾದ ಎಲ್ಲಾ ಮಾಹಿತಿಗಳೂ ದೊರಕಿದವು. ನನಗೆ ಅತ್ಯಂತ ಸಂತೋಷವಾಯಿತು. ಸತ್ಯವಾಗಿಯೂ ಆಧ್ಯಾತ್ಮಿಕ ಮಟ್ಟದಲ್ಲಿ ಮಾತ್ರವಲ್ಲದೆ ಈ ಪ್ರಾಪಂಚಿಕ ಬದುಕಿನ ಎಲ್ಲ ವಿಷಯಗಳಲ್ಲೂ ರಕ್ಷಣೆ ಹಾಗೂ ಮಾರ್ಗದರ್ಶನ ಪಡೆಯುತ್ತಿರುವೆವು ಎಂಬ ನಂಬಿಕೆ ಬಂದಿತು.

– ಲಾವಣ್ಯ. ಬಿ.

ಸ್ವಲ್ಪ ಸೂಕ್ಷ್ಮ ಪ್ರವೃತ್ತಿಯವಳಾದ ನನ್ನ ಕೊನೆಯ ಮಗಳಿಗೆ ಪ್ರೀತಿ ಕಳುಹಿಸಲು ಪ್ರಯತ್ನಿಸಿದೆ. ಅವಳು ಬೇರೆಯವರ ಭಾವನೆಗಳಿಗೆ ಬಹಳ ಬೇಗ ಪ್ರತಿಕ್ರಿಯಿಸುತ್ತಾಳೆ. ಅದು ಅವಳ ಆಹಾರ ಸೇವನೆಯ ಮೇಲೆ ಪ್ರಭಾವ ಬೀರುತ್ತದೆ. ನನಗೆ ಎಲ್ಲಿ ಅವಳ ಆರೋಗ್ಯ ಏರುಪೇರಾಗುವುದೋ ಎಂಬ ಭಯ. ನಾನು ಪ್ರತಿ ದಿನ ಅವಳಿಗೆ ಬೆಳಕನ್ನು ಕಳುಹಿಸುತ್ತಿರುವುದರಿಂದ ಈಗ ಅವಳು ಆಹಾರದ ವಿಚಾರದಲ್ಲಿ ಸುಧಾರಿಸಿದ್ದಾಳೆ.

– ಹೀನಾ ರೈಕರ್

ನಾನು ಪ್ರಶಾಂತವಾಗಿದ್ದು ಪ್ರೀತಿ ಮತ್ತು ಶಾಂತಿಯನ್ನು ಯಾವಾಗಲೂ ಅನುಭವಿಸುತ್ತಿರುತ್ತೇನೆ. ಹೊರಗಿನ ಸಂದರ್ಭಗಳು ನನ್ನನ್ನು ಪ್ರಚೋದಿಸಿದರೂ ಶೇಕಡಾ 90ರಷ್ಟು ಭಾಗ ನಾನು ವಿಚಲಿತಳಾಗುವುದಿಲ್ಲ.

– ಪ್ರೇಮ್ ಆನಂದ್ ಎನ್

ಮುಗುಳ್ನಗೆಯಿಂದ ಕೂಡಿರುವ ಗುರೂಜಿಯವರ ಭಾವಚಿತ್ರವನ್ನು ನಾನು ನೋಡೇ ಇರಲಿಲ್ಲ. ಅವರ ಭಾವಚಿತ್ರ ನೋಡಿದಾಗಲೆಲ್ಲ ಅವರು ನನ್ನ ಮೇಲೆ ಕೋಪಿಸಿಕೊಂಡಿರುವಂತೆಯೇ ಅನ್ನಿಸುತ್ತಿತ್ತು. ನಂತರ ಯು ಟ್ಯೂಬ್‌ನ (youtube) ಒಂದು ವಿಡಿಯೋದಲ್ಲಿ ಗುರೂಜಿಯವರು ಮುಗುಳ್ನಗುತ್ತಿರುವುದನ್ನು ನೋಡಿದೆ. ಅದನ್ನು ನೋಡಿದೊಡನೆ, ಗುರೂಜಿಯವರು, ನಿನ್ನ ಮೇಲೆ ನನಗೆ ಕೋಪವಿಲ್ಲ ಎಂದು ಹೇಳಿದಂತೆನಿಸಿತು. ಅವರ ನೋಟದಲ್ಲಿ ಅತ್ಯಂತ ಪ್ರೀತಿ ಹಾಗೂ ಕರುಣೆ ತುಂಬಿರುವಂತೆನಿಸಿತು. ಇದು ನನಗೆ ನಿರಾಳತೆ ಹಾಗೂ ಭಾವಪರವಶತೆಯನ್ನು ಏಕಕಾಲದಲ್ಲಿ ತಂದು ಕೊಟ್ಟಿತು. ಈ ದಿವ್ಯ ಚೇತನ ನಮ್ಮನ್ನು ಗಮನಿಸುತ್ತಿರುವರು ಮತ್ತು ಆಶೀರ್ವದಿಸುತ್ತಿರುವರು ಎಂಬುದಕ್ಕೆ ಇದು ಮತ್ತೊಂದು ನಿದರ್ಶನ. ಇದರ ಜೊತೆಗೆ ನಮ್ಮ ಆಲೋಚನೆಗಳ ಶಕ್ತಿಯ ಅರಿವಾಯಿತು.

– ಅಶ್ವಿನಿ. ಕೆ.

ಧ್ಯಾನವು ನಮ್ಮ ದೈನಂದಿಕ ಜೀವನದಲ್ಲಿ ಸ್ಥಿರವಾದಾಗ, ಕಾಲ ಹಾಗೂ ಪ್ರದೇಶದಲ್ಲಿ ಮಹತ್ತರ ಬದಲಾವಣೆ ಆಗುತ್ತದೆ. ಎಲ್ಲ ಕಡೆಯೂ, ನಮ್ಮ ಸುತ್ತಲಿನ ಕಣ ಕಣದಲ್ಲೂ ಇರುವ ಭಗವಂತನ ಇರುವಿಕೆಯು, ಎಲ್ಲಾ ಸ್ಥಳವೂ ಶ್ರೇಷ್ಠವೇ ಮತ್ತು ಎಲ್ಲವೂ ಎಲ್ಲರಿಗೂ ಸೇರಿದ್ದೇ ಎಂಬ ಅರಿವು ಉಂಟಾಗುವಂತೆ ಮಾಡುತ್ತದೆ. ಅದೇ ರೀತಿ ಭಗವಂತನ ಇರುವಿಕೆಯನ್ನು ಈ ಕ್ಷಣದಲ್ಲಿ ಅನುಭವಿಸಿದರೆ, ಪ್ರತಿಕ್ಷಣವೂ ಮುಖ್ಯ ಹಾಗೂ ಶ್ರೇಷ್ಠ ಎನಿಸುತ್ತದೆ.

– ಸುಲೋಚನಾ ರಾಮಸ್ವಾಮಿ

ತಪೋವಾಣಿ, ಕನ್ನಡ ಮಾಸಪತ್ರಿಕೆ, ವಾರ್ಷಿಕ ಚಂದಾ : ರೂ.300/–
ಸಂಪಾದಕರು, ಪ್ರಕಾಶಕರು ಮತ್ತು ಮುದ್ರಕರು : ಶ್ಯಾಮಲಾ ದೇವಿ, ತಪೋನಗರ, ಚಿಕ್ಕಗುಬ್ಬಿ, (ಹೆಣ್ಣೂರು–ಬಾಗಲೂರು ರೋಡ್) ಬೆಂಗಳೂರು ಅರ್ಬನ್ – 560 077. ಮಾನಸ ಫೌಂಡೇಶನ್ (ರಿ.) ಪರವಾಗಿ.
ಮಾಲೀಕರು : ಮಾನಸ ಫೌಂಡೇಶನ್ (ರಿ.), ತಪೋನಗರ, ಚಿಕ್ಕಗುಬ್ಬಿ, ಬೆಂಗಳೂರು ಅರ್ಬನ್ – 560 077
ಪ್ರಕಾಶನ ಸ್ಥಳ ಮಾನಸ ಫೌಂಡೇಶನ್ (ರಿ.), ತಪೋನಗರ, ಚಿಕ್ಕಗುಬ್ಬಿ, ಬೆಂಗಳೂರು ಅರ್ಬನ್ – 560 077
ಮುದ್ರಣ ಸ್ಥಳ : ಆರ್ಟ್ ಪ್ರಿಂಟ್, 719/ ಎ, ವೆಸ್ಟ್ ಆಫ್ ಕಾರ್ಡ್ ರೋಡ್, 2ನೇ ಸ್ಟೇಜ್, ರಾಜಾಜಿನಗರ, ಬೆಂಗಳೂರು–560086. ಫೋನ್: 23359992
ಸಂಪಾದಕರು : ಶ್ಯಾಮಲಾ ದೇವಿ